# ವಿಠ್ಠಲ ರುಕ್ಮಿಣಿ ಮಂದಿರದಲ್ಲಿ ಏಕಾದಶಿ ಆಚರಣೆ



**ಮಹಾಲಿಂಗಪುರ :** ಸ್ಥಳೀಯ ಬುದ್ನಿ ಪಿಡಿಯ ವಿಠ್ಠಲ ರುಕ್ಮಿಣಿ ಮಂದಿರದಲ್ಲಿ ಆಷಾಢ ಏಕಾದಶಿ ಪ್ರಯುಕ್ತ ಬುಧವಾರ ಬೆಳಿಗ್ಗೆಯಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು.

ಅಭಿಷೇಕ, ಮಹಾಮಂಗಳಾರತಿ, ಏಕಾದಶಿ ಉಪಹಾರ ಮತ್ತು ಮಹಾಪ್ರಸಾದ ಜರುಗಿತು. ಭಕ್ತರು ವಿಠ್ಠಲ ರುಕ್ಮಿಣಿಗೆ ತುಳಸಿ ಮಾಲೆ ಮತ್ತು ಪುಷ್ಪಗಳನ್ನು ಸಮರ್ಪಿಸಿದರು. ಗುರುವಾರ ಬೆಳಗಿನವರೆಗೆ ಇಡಿ ರಾತ್ರಿ ಸಂತರಿಂದ ವಿಠ್ಠಲ ರುಕ್ಮಿಣಿ ನಾಮ ಜಪ ಮತ್ತು ಭಜನೆ ನಡೆಯಿತು.

ವಿಠ್ಠಲ ರುಕ್ಮಿಣಿ ಸೇವಾ ಸಮಿತಿಯ ಕೃಷ್ಣಗೌಡ ಪಾಟೀಲ, ಗೌಡಪ್ಪಗೌಡ ಪಾಟೀಲ, ಮಲ್ಲಪ್ಪ ಅಂಬಣ್ಣಗೋಳ, ವಿಠ್ಠಲಗೌಡ ಪಾಟೀಲ, ನಾರಾಯಣಗೌಡ ಪಾಟೀಲ, ಸದಾಶಿವ ಶೇಗುಣಸಿ, ಸದಪ್ಪ ಬೇವಿನಗಿಡದ, ಮಹಾಲಿಂಗಗೌಡ ಪಾಟೀಲ, ಬಸಯ್ಯ ಮಠಪತಿ, ಕುಮಾರ ಪವಾರ, ಗಿರಿಮಲ್ಲಪ್ಪ ಯಾದವಾಡ, ಹನಮಂತ ಬಡಿಗೇರ, ಆದಿತ್ಯ ನಾಯಕ, ಅರ್ಚಕಿ ಬೇಬವ್ವ ಯಾದವಾಡ, ಕಲಾವತಿ ಯಾದವಾಡ ಮತ್ತು ಭಕ್ತರು ಇದ್ದರು.

# ಲಯನ್ಸ್ ಕ್ಲಬ್ ಮೂಡಲಗಿ ಪರಿವಾರದ ಪದಗ್ರಹಣ 'ಸಮಾಜ ಸೇವೆ ಜನರಿಗೆ ಉಪಯುಕ್ತವಾಗಿರಬೇಕು'




**ಮೂಡಲಗಿ :** 'ನಿಸ್ವಾರ್ಥದಿಂದ ಮಾಡುವ ಸಮಾಜ ಸೇವೆಯು ನಿಜವಾದ ಸಮಾಜ ಸೇವೆಯಾಗಿರುತ್ತದೆ' ಎಂದು ಯಲ್ಲಟ್ಟಿ ಕೊಣ್ಣೂರ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಪ್ರೊ. ಬಸವರಾಜ ಕೊಣ್ಣೂರ ಹೇಳಿದರು.

ಇಲ್ಲಿಯ ಮೂಡಲಗಿ ಶಿಕ್ಷಣ ಸಂಸ್ಥೆಯ ಕಲ್ಮೇಶ್ವರಬೋಧ ಸ್ವಾಮಿ ಸಭಾಭವನದಲ್ಲಿ ಏರ್ಪಡಿಸಿದ್ದ 2024-25ನೇ ಸಾಲಿನ ಲಯನ್ಸ್ ಕ್ಲಬ್ ಮೂಡಲಗಿ ಪರಿವಾರದ ಪದಾಧಿಕಾರಿಗಳ ಪದಗ್ರಹಣ ನೆರವೇರಿಸಿ ಮಾತನಾಡಿದ ಅವರು ನಾವು ಮಾಡುವ ಸಮಾಜ ಸೇವೆಯು ಜನರಿಗೆ ಅಗತ್ಯವಾಗಿರಬೇಕು ಮತ್ತು ಅವರ ಹೃದಯದಲ್ಲಿ ಉಳಿಯಬೇಕು ಎಂದರು.

ಮುಖ್ಯ ಅತಿಥಿ ಪಶು ಸಂಗೋಪನಾ ಇಲಾಖೆಯ ಡಾ. ಎಂ.ಬಿ. ವಿಭೂತಿ ಅವರು ಮಾತನಾಡಿ 'ಭಾರತೀಯ ಪುರಾಣಗಳಲ್ಲಿ ಪರೋಪಕಾರವು ಪುಣ್ಯವನ್ನು ಪ್ರಾಪ್ತಿಗೊಳಿಸುತ್ತದೆ ಎಂದರು. ನಿರ್ಗಮಿತ ಅಧ್ಯಕ್ಷ ಶ್ರೀಶೈಲ್ ಲೋಕನ್ನವರ, ಕಾರ್ಯದರ್ಶಿ ಸುಪ್ರೀತ ಸೋನವಾಲಕರ ವೇದಿಕೆಯಲ್ಲಿದ್ದರು.

ವಿವಿಧ ಸಾಧಕರನ್ನು ಹಾಗೂ ಅನ್ನದಾಸೋಹಿಗಳನ್ನು ಸನ್ಮಾನಿಸಿದರು.

2024-25ನೇ ಸಾಲಿಗೆ ಲಯನ್ಸ್ ಪರಿವಾರದ ಅಧ್ಯಕ್ಷರಾಗಿರುವ ಸಂಜಯ ಮೋಕಾಶಿ, ಕಾರ್ಯದರ್ಶಿ ಸೋಮಶೇಖರ ಹಿರೇಮಠ ಹಾಗೂ ಖಜಾಂಚಿಯಾಗಿ ಕೃಷ್ಣಾ ಕೆಂಪಸತ್ತಿ ಹಾಗೂ ಉಳಿದ ಪದಾಧಿಕಾರಿಗಳಿಗೆ ಪ್ರೊ. ಕೊಣ್ಣೂರ ಪ್ರಮಾಣ ವಚನ ಬೋಧಿಸಿ ಪದಗ್ರಹಣವನ್ನು ನೆರವೇರಿಸಿದರು.

ವೆಂಕಟೇಶ ಸೋನವಾಲಕರ, ಡಾ. ಪ್ರಕಾಶ ನಿಡಗುಂದಿ, ಎನ್.ಟಿ. ಪಿರೋಜಿ, ಪುಲಕೇಶ ಸೋನವಾಲಕರ, ಸುರೇಂದ್ರ ಆದಪ್ಪಗೋಳ, ಮಹಾಂತೇಶ ಹೊಸೂರ, ವಿಶಾಲ ಶೀಲವಂತ, ಲಕ್ಷ್ಮಣ ಕಂಕಣವಾಡಿ, ಡಾ. ಯಲ್ಲಾಲಿಂಗ ಮಳವಾಡ, ವೀರಭದ್ರ ಜಕಾತಿ, ಮಹಾಂತೇಶ ಹೊಸೂರ, ಡಾ. ರವಿ ಕಂಕಣವಾಡಿ, ಮಲ್ಲಪ್ಪ ಖಾನಗೌಡರ, ಡಾ ರಾಜೇಂದ್ರ ಗಿರಡ್ಡಿ, ಶಿವಬಸು ಈಟಿ ಸಹಿತ ಪರಿವಾರದ ಸದಸ್ಯರು ಇದ್ದರು. ಬಾಲಶೇಖರ ಬಂದಿ ಪ್ರಾಸ್ತಾವಿಕ ಮಾತನಾಡಿದರು, ಶ್ರೀಶೈಲ್ ಲೋಕನ್ನವರ ಸ್ವಾಗತಿಸಿದರು, ಡಾ. ಸಂಜಯ ಶಿಂಧಿಹಟ್ಟಿ ಪರಿಚಯಿಸಿದರು, ಮಹಾವೀರ ಸಲ್ಲಾಗೋಳ, ಶಿವಾನಂದ ಕಿತ್ತೂರ ನಿರೂಪಿಸಿದರು, ಸೋಮಶೇಖರ ಹಿರೇಮಠ ವಂದಿಸಿದರು.

# ಬಡ ವಿದ್ಯಾರ್ಥಿಗಳಿಗೆ ಉಚಿತ ಕಂಪ್ಯೂಟರ್ ತರಬೇತಿ ಶಿಬಿರ




**ಕೊಪ್ಪಳ :** ಕೊಪ್ಪಳ ಇನ್ನರ್ ವೀಲ್ ಕ್ಲಬ್ ವತಿಯಿಂದ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯ ಉಜ್ವಲ ಗೊಳಿಸಲು ಅವರಿಗೆ ಉಚಿತವಾಗಿ ಕಂಪ್ಯೂಟರ್ ಶಿಕ್ಷಣ ತರಬೇತಿ ಶಿಬಿರ ಏರ್ಪಡಿಸಲಾಗಿದೆ ಎಲ್ಲಾ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣ ತಜ್ಞರಾದ ಮಂಜುನಾಥ್ ಉಲ್ಲತಿಯವರು ಉಚಿತವಾಗಿ ಕಂಪ್ಯೂಟರ್ ಶಿಕ್ಷಣ ತರಬೇತಿ ನೀಡುತ್ತಿರುವುದು ಅತ್ಯಂತ ಉತ್ತಮ ಕೆಲಸವಾಗಿದೆ ಅವರಿಗೆ ಕ್ಲಬ್ ಪರವಾಗಿ ಅಭಿನಂದಿಸುವೆ ಎಂದು ಕೊಪ್ಪಳ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷರಾದ ಉಮಾ ಮಹೇಶ್ ತಂಬ್ರಳ್ಳಿ ಹೇಳಿದರು

ಕೊಪ್ಪಳ ಇನ್ನರ್ ವೀಲ್ ಕ್ಲಬ್ ವತಿಯಿಂದ ನಡೆಯುತ್ತಿರುವ ಕಂಪ್ಯೂಟರ್ ತರಬೇತಿ ಕೇಂದ್ರಕ್ಕೆ ಭೇಟಿ ಮಾಡಿ ಬಡ ವಿದ್ಯಾರ್ಥಿಗಳು ಶಿಬಿರದಲ್ಲಿ ಪಾಲ್ಗೊಂಡಿರುವುದನ್ನು ನೋಡಿ ಸಂತೋಷ ವ್ಯಕ್ತಪಡಿಸಿ ಎಲ್ಲಾ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಉಮಾ ಮಹೇಶ್ ತಂಬ್ರಳ್ಳಿ ಹೇಳಿದರು

ಈ ಸಂದರ್ಭದಲ್ಲಿ ಅವರೊಂದಿಗೆ ಕೊಪ್ಪಳ ಇನ್ನರ್‌ವಿಲ್ ಕ್ಲಬ್ಬಿನ ಕಾರ್ಯದರ್ಶಿ ಮೀನಾಕ್ಷಿ ಬಣ್ಣದ ಬಾವಿ. ಉಪಾಧ್ಯಕ್ಷರಾದ ಮಧು ಶೆಟ್ಟರ್ ಐ ಎಸ್ ಓ ಮಧು ನಿಲೋಗಲ್ ಎಡಿಟರ್ ನಾಗವೇಣಿ ಮತ್ತು ಸದಸ್ಯರಾದ ಲತಾ ಉಲ್ಲತಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ವಿದ್ಯಾರ್ಥಿಗಳಲ್ಲಿ ಪ್ರಾಣಿಗಳ ರಕ್ಷಣೆ ಕುರಿತು ಜಾಗೃತಿ ಅಗತ್ಯ: ಡಾ. ಪ್ರಶಾಂತ ಕುರಬೇಟ




**ಮೂಡಲಗಿ :** ವಿದ್ಯಾರ್ಥಿಗಳಲ್ಲಿ ಪ್ರಾಣಿಗಳ ರಕ್ಷಣೆ ಕುರಿತು ಜಾಗೃತಿ ಅಗತ್ಯವಾಗಿದ್ದು ಪ್ರಾಣಿಗಳ ರಕ್ಷಣೆಯಲ್ಲಿ ಯುವಕರ ಮಹತ್ವದ ಪಾತ್ರ ವಹಿಸಬೇಕು ಮಾನವನ ಜೀವನಕ್ಕೆ ಜೀವಸಂಕಲಗಳು ಪೂರಕವಾಗಿದ್ದು ಅವುಗಳು ನಮಗೆ ಬಹುಉಪಯೋಗಿಗಳಾಗಿ ನಮ್ಮ ಜೀವನದಲ್ಲಿ ಸಹಾಯಕ್ಕೆ ಬರುತ್ತೇವೆ ಪ್ರಾಣಿ ಪಕ್ಷಿಗಳ ನಿರ್ವಹಣೆಯು ಒಂದು ಕಲೆಯಾಗಿದ್ದು ಪ್ರಾಣಿ ಮತ್ತು ಪಕ್ಷಿಗಳು ಇಂದಿನ ಮಾನವನ ಜೀವನ ಶೈಲಿಯಿಂದ ತಮ್ಮ ಆಸ್ತಿತ್ವ ಕಳೆದುಕೊಳ್ಳುವ ಹಂತಕ್ಕೆ ಬಂದಿದ್ದು ಅವುಗಳನ್ನು ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಅವರಾದಿಯ ಪಶು ವೈದ್ಯಾಧಿಕಾರಿ ಡಾ ಪ್ರಶಾಂತ ಕುರುಬೇಟ ಹೇಳಿದರು.

ಪಟ್ಟಣದ ಆರ್‌ಡಿಎಸ್ ಕಲಾ ವಾಣಿಜ್ಯ ವಿಜ್ಞಾನ ಹಾಗೂ ಸಮಾಜಕಾರ್ಯ ಪದವಿ ಮಹಾವಿದ್ಯಾಲಯ ಹಾಗೂ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಎನ್.ಎಸ್.ಎಸ್. ಕೋಶದ ವತಿಯಿಂದ ಸಮೀಪದ ದತ್ತು ಗ್ರಾಮ ಮುನ್ಯಾಳದಲ್ಲಿ ಹಮ್ಮಿಕೊಂಡ ಎನ್.ಎಸ್.ಎಸ್. ವಾರ್ಷಿಕ ಶಿಬಿರದಲ್ಲಿ ಮಾತನಾಡಿ ಮಾನವ ಪ್ಲಾಸ್ಟಿಕ & ಪ್ರಾಣಿಗಳ ಆರೋಗ್ಯಕ್ಕೆ ಹಾನಿಯನ್ನುಂಟು ಮಾಡುವ ವಸ್ತುಗಳನ್ನು ಪರಿಸರದಲ್ಲಿ ಬಿಸಾಡುವದರಿಂದ ಪ್ರಾಣಿ ಪಕ್ಷಿಗಳು ಅವುಗಳನ್ನು ಆಹಾರದ ಭಾಗವಾಗಿ ಸೇವನೆ ಮಾಡಿದಾಗ ಅವುಗಳ ಜೀವಕ್ಕೆ ತೊಂದರೆಯಾಗುತ್ತದೆ ಪ್ಲಾಸ್ಟಿಕ, ಸೂಜಿ, ಬಟ್ಟೆ ಮತ್ತು ಅನುಪಯುಕ್ತ ಇನ್ನಿತರ ಸಾಮಗ್ರಿಗಳನ್ನು ಪರಿಸರದಲ್ಲಿ ಬಿಸಾಡುವದರಿಂದ ಪರಿಸರ ಹಾಳಾಗುವದರ ಜೊತೆಗೆ ಪ್ರಾಣಿ ಮತ್ತು ಪಕ್ಷಿಗಳ ಜೀವನಕ್ಕೆ ಮಾರಕವಾಗುತ್ತದೆ ಪರಿಸರ ಸಂರಕ್ಷಣೆಯ ಜೊತೆಗೆ ಪ್ರಾಣಿಗಳ ಜೀವ ರಕ್ಷಣೆಗೆ ನಾವೆಲ್ಲರೂ ಮುಂದಾಗೋಣ ಎಂದರು.

ಉಪನ್ಯಾಸಕ ಬಿ, ಎಂ, ಕಬ್ಬೂರೆ ಮಾತನಾಡಿ ಪ್ರಾಣಿಗಳು ಪಕ್ಷಿಗಳು ನಮ್ಮ ಜೀವನದ ಆಧಾರಗಳು ಅವುಗಳ ರಕ್ಷಣೆ ನಮ್ಮೆಲ್ಲರ ಕರ್ತವ್ಯ ಎಂದರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀವಿದ್ಯಾನಿಕೇತನ ಪ್ರಾಥಮಿಕ ಶಾಲೆಯ ಪ್ರಧಾನ ಗುರುಗಳಾದ ಸಂಗಮೇಶ ಹಳ್ಳೂರ ವಹಿಸಿಕೊಂಡು ಮಾತನಾಡಿ ಪರಿಸರದ ಕಾಳಜಿಯ ಜೊತೆಗೆ ಪ್ರಾಣಿಗಳ ಸಂರಕ್ಷಣೆಯಲ್ಲಿ ನಮ್ಮೆಲ್ಲರ ಪಾತ್ರ ಮಹತ್ವದಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮಡೆಪ್ಪಾ ಮದಿಹಳ್ಳಿ, ಕೃಷ್ಣಪ್ಪ ಒಂಟಿಗೋಡಿ, ಸಂಜುಗಾಂಧಿ ಹೆಬ್ಬಾಳ ಶ್ರೀಶೈಲ್ ವಡೆಯರ, ಶ್ರೀಶೈಲ್ ಸೂರನ್ನವರ, ಲಗಮಣ್ಣ ಗೋಣಿ ಮುತ್ತು ಒಡೆಯರ, ಪ್ರಕಾಶ ಚೌಡಕಿ, ರಾಜು ಪತ್ತಾರ, ಸಂಜೀವ ಮಂಟೂರ ಇತರರು ಹಾಜರಿದ್ದರು.

ಶಿಬಿರಾರ್ಥಿ ನೀಖಿತಾ ಕುಡಚಿ ನಿರೂಪಿಸಿದರು ಶಿಬಿರಾರ್ಥಿ ಸೌಜನ್ಯ ಮೂಡಲಗಿ ಸ್ವಾಗತಿಸಿದರು ಶಿಬಿರಾರ್ಥಿ ತಿಪ್ಪಣ್ಣ ಜಿರ್ಲಿ ವಂದಿಸಿದರು.

# ಅಪರ ಸರಕಾರಿ ವಕೀಲರ ಹುದ್ದೆಗೆ ಅರ್ಜಿ

**ಬಾಗಲಕೋಟೆ :** ಜಿಲ್ಲೆಯ ಹುನಗುಂದ, ಬೀಳಗಿ ಹಾಗೂ ಜಮಖಂಡಿ ತಾಲೂಕಿನ ಹಿರಿಯ ಶ್ರೇಣಿ ನ್ಯಾಯಾಲಯದ ಅರಪ ಸರಕಾರಿ ವಕೀಲರ ಹುದ್ದೆಗೆ ಒಂದು ವರ್ಷದ ಅವಧಿಯವರೆಗೆ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವವರು 7 ವರ್ಷಗಳ ಕಾಲ ವಕೀಲ ವೃತ್ತಿಯನ್ನು ಪೂರೈಸಿರದವರು ಅರ್ಜಿ ಸಲ್ಲಿಸಬಹುದಾಗಿದೆ. ಅರ್ಹ ವಕೀಲರು ತಮ್ಮ ಹೆಸರು, ವಿಳಾಸ, ಮೊಬೈಲ್ ನಂಬರ, ದೃಡೀಕೃತ ಪದವಿ ಪ್ರಮಾಣ ಪತ್ರಗಳು, ರಾಜ್ಯ ಬಾರ್ ಕೌನ್ಸಲಿಂಗ್‌ನಲ್ಲಿ ನೋಂದಾಯಿಸಿದ ಬಗ್ಗೆ ದೃಡೀಕೃತ ಪ್ರತಿ, ಸ್ಥಳೀಯವಕೀಲರಸಂಘದಲ್ಲಿನೋಂದಾಯಿಸಿದ ಬಗ್ಗೆ ಪ್ರಮಾಣ ಪತ್ರ ಹಾಗೂ 7 ವರ್ಷ ವಕೀಲವೃತ್ತಿ ಪೂರೈಸಿದ ಬಗ್ಗೆ ಪ್ರಮಾಣ ಪತ್ರದೊಂದಿಗೆ ಜುಲೈ 31 ರೊಳಗಾಗಿ ಜಿಲ್ಲಾಧಿಕಾರಿಗಳು ಬಾಗಲಕೋಟೆ ಅವರ ಕಾರ್ಯಾಲಯಕ್ಕೆ ಸಲ್ಲಿಸುವಂತೆ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸದೃಢವಾದ ಶಾಂತಿಯ ತೋಟ ಕಟ್ಟಲು ಶ್ರಮಿಸೋಣ





**ಕೊಪ್ಪಳ :** ನಾವೆಲ್ಲರೂ ಒಂದಾಗಿ ನಮ್ಮ ದೇಶವನ್ನು ಕಟ್ಟಲು ಒಂದು ಸದೃಢವಾದ ಶಾಂತಿಯ ತೋಟವನ್ನು ಕಟ್ಟಲು ಶ್ರಮಿಸೋಣ ಎಂದು ಜಮಾತೆ ಇಸ್ಲಾಮಿ ಹಿಂದ್ ರಾಷ್ಟ್ರೀಯ ಉಪಾಧ್ಯಕ್ಷರು ಹಾಗೂ ಅಖಿಲ ಭಾರತ ಸದ್ಭಾವನ ಮಂಚ್ ನ ರಾಷ್ಟ್ರೀಯ ಸದಸ್ಯರಾದ ಪ್ರೊಫೆಸರ್ ಮೊಹಮ್ಮದ್ ಸಲೀಂ ಹೇಳಿದರು

ಅವರು ನಗರದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಕೊಪ್ಪಳ ಜಮಾತೆ ಇಸ್ಲಾಮಿ ಹಿಂದ್ ಏರ್ಪಡಿಸಿದ ಸದ್ಭಾವನಾ ಸಭೆ ಮತ್ತು ಸೌಹಾರ್ದ ಕೂಟ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು ಮುಂದುವರೆದು ಮಾತನಾಡಿ ಸಮಾನತಾ ಮತ್ತು ಸಮವೃತ್ತ, ನ್ಯಾಯ ಅನ್ಯಾಯ ನ್ಯಾಯವಿಲ್ಲದೆ ಶಾಂತಿ ಲಭಿಸುದಿಲ್ಲ, ಸಹೋದರತ್ವ ಮತ್ತು ಸನ್ಮಾನ, ಸಂವಾದ ಮುಖಾಂತರ ನಾವು ಪರಸ್ಪರ ಸೌಹಾರ್ದತೆ ಬೆಳೆಸಿಕೊಳ್ಳಬೇಕು ಉತ್ತಮ ಕಾರ್ಯ ಚಟುವಟಿಕೆ ಮಾಡುವುದರ ಜೊತೆಗೆ ಸಮಾಜಕ್ಕೆ ಉತ್ತಮ ರೀತಿಯ ಸೇವೆ ಸಲ್ಲಿಸಬೇಕು ಎಂದರು ,ಇಂದು ಸಜ್ಜನರು ಗರಿಷ್ಠ ಪ್ರಮಾಣದಲ್ಲಿ ಇದ್ದರೂ ಕೂಡ ದುರ್ಜನರ ಪ್ರಮಾಣ ಕಡಿಮೆ ಇದ್ದರೂ ಕೂಡ ಅವರ ಸಂಘಟನಾತ್ಮಕ ಪ್ರಯತ್ನದಿಂದ ಸಫಲರಾಗಿದ್ದಾರೆ, ನಾವುಗಳು ಸಜ್ಜನರು ಮೂಕ ಪ್ರೇಕ್ಷಕರಾಗಿ ಇದ್ದರೆ ಖಂಡಿತ ಲಾಭವನ್ನು ದುರ್ಜನರಿಗೆ ಆಗುತ್ತದೆ ನಾವೆಲ್ಲರೂ ಒಂದಾಗಿ ನಮ್ಮ ದೇಶವನ್ನು ಕಟ್ಟಲು ಒಂದು ಸದೃಢ ಶಾಂತಿಯ ತೋಟವನ್ನು ಕಟ್ಟಲು ಶ್ರಮಿಸೋಣ ಎಂದವರು ಕೋಮು ಸೌಹಾರ್ದತೆ ರಾಷ್ಟ್ರೀಯ ಭಾವೈಕ್ಯತೆ ಬೆಳೆಸಿಕೊಂಡು ಪರಸ್ಪರ ಉತ್ತಮ ಬಾಂಧವ್ಯ ಬೆಳೆಸಿಕೊಂಡು ಜೀವನ ಸಾಗಿಸಿದರೆ ಬದುಕು ಸಾರ್ಥಕ ಎಂದು ಅಖಿಲ ಭಾರತ ಸದ್ಭಾವನ ಮಂಚ್ನ ರಾಷ್ಟ್ರೀಯ ಸದಸ್ಯರಾದ ಮೊಹಮ್ಮದ್ ಸಲೀಂ ಹೇಳಿದರು

ಶಾಂತಿ ಪ್ರಕಾಶನದ ವ್ಯವಸ್ಥಾಪಕರಾದ ಮೊಹಮ್ಮದ್ ಕುಯಿಂ ಮಾತನಾಡಿ ಇಂದಿನ ಸಂದರ್ಭದಲ್ಲಿ ಸುಳ್ಳನ್ನು ಪದೇ ಪದೇ ಹೇಳಿ ನಿಜ ಮಾಡುವ ಸಂದರ್ಭ ಉಂಟಾಗಿದ್ದು ನಾವು ಒಗ್ಗಟ್ಟಾಗಿ ಸುಳ್ಳನ್ನು ಸೋಲಿಸಬೇಕಾಗಿದೆ ವಾಸ್ತವಿಕತೆ ತಿಳಿಯುವ ಮತ್ತು ತಿಳಿಸುವ ಕೆಲಸ ನಡೆಯಬೇಕಾಗಿದೆ ಸಂಕೀರ್ಣ ಸಮಸ್ಯೆಗಳನ್ನು ಬಗೆಹರಿಸುವವನು ನಮ್ಮ ನಾಯಕ ಆದರೆ ದುರಾದೃಷ್ಟ ವಾಗಿ ಸಮಸ್ಯ ಸೃಷ್ಟಿಸುವನು ನಾಯಕನಾಗಿದ್ದಾನೆ ಇದು ಒಳ್ಳೆಯ ಬೆಳವಣಿಗೆ ಅಲ್ಲ ಮನುಷ್ಯನಿಗೆ ಬೇರ್ಪಡಿಸುವುದು ಯಾವ ಧರ್ಮ ಹೇಳಿಲ್ಲ ಸಮಾಜದಲ್ಲಿನ ಕೆಡುಕು ಹೋಗಲಾಡಿಸಲು ಪ್ರತಿಯೊಬ್ಬರು ಶ್ರಮಿಸಬೇಕು ಸಮಾಜದ ಸಮಾರಸ್ಯ ಸೌಹಾರ್ದತೆ ನಮ್ಮ ಊರು ನಮ್ಮವರು ಎಂಬ ಅಭಿಮಾನ ರೂಡಿಸಿಕೊಳ್ಳಬೇಕು ಪರಸ್ಪರ ಸೌಹಾರ್ದತೆಯ ಬದುಕು ನಮ್ಮದಾಗಬೇಕು ಎಂದು ಮೊಹಮ್ಮದ್ ಕುಯಿಂ, ಅಭಿಪ್ರಾಯ ಪಟ್ಟರು

ವೇದಿಕೆ ಮೇಲೆ ಜಮಾತೆ ಇಸ್ಲಾಮಿ ಹಿಂದ ಕೊಪ್ಪಳದ ಅಧ್ಯಕ್ಷರಾದ ಹಿದಾಯತ್ ಅಲಿ ವಲಯ ಸಂಚಾಲಕರಾದ ರಾಯಚೂರಿನ ಮೌಲಾನ ಅನ್ವರ್ ಪಾಷಾ ಉಮರಿ ಜಿಲ್ಲಾ ಸಂಚಾಲಕ ದಿಲಾವರ್ ಅಂಬರ್ ಖಾನ್ ಪಾಲ್ಗೊಂಡಿದ್ದು ಆರಂಭದಲ್ಲಿ ಮಹಮ್ಮದ್ ಫಹಿಮುದ್ದೀನ್ ಕುರಾನ್ ಪಠಣ ಮಾಡಿ ಅದರ ಕನ್ನಡ ಅನುವಾದ ಸಭಿಕರಿಗೆ ತಿಳಿಸಿದರು ಅಭಿಯಂತ ಹಾಗೂ ಜಮಾತೆ ಇಸ್ಲಾಮಿ ಹಿಂದನ ಸದಸ್ಯರಾದ ತಾಜುದ್ದೀನ್ ರವರು ಆರಂಭದಲ್ಲಿ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿ ಕೊನೆಯಲ್ಲಿ ವಂದಿಸಿದರು.

# ಕೊಪ್ಪಳ: ವಸತಿ ನಿಲಯದಲ್ಲಿನ ಸೌಕರ್ಯದ ಸ್ಥಿತಿಗತಿ ಖುದ್ದು ಪರಿಶೀಲಿಸಿದ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ





**ಕೊಪ್ಪಳ:** ಕೃಷ್ಣಭಾಗ್ಯಜಲನಿಗಮನಿಯಮಿತದ ವ್ಯವಸ್ಥಾಪಕ ನಿರ್ದೇಶಕರಾಗಿರುವ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಕೆ.ಪಿ. ಮೋಹನ್ ರಾಜ್ ಅವರು ಜುಲೈ 13ರಂದು ಕೊಪ್ಪಳ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಕುಕನೂರ ಸೇರಿದಂತೆ ವಿವಿಧೆಡೆ ಸಂಚರಿಸಿ ಪರಿಶೀಲನೆ ನಡೆಸಿದರು.

ಕುಕನೂರಿನ ಸಮಾಜ ಕಲ್ಯಾಣ ಇಲಾಖೆಯ ಡಾ.ಬಿ.ಆರ್.ಅಂಬೇಡ್ಕರ್ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ ಹಾಗೂ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯಗಳಿಗೆ ಭೇಟಿ ನೀಡಿದರು. ವಸತಿ ನಿಲಯದಲ್ಲಿನ ಗಣಯಂತ್ರ ಕೊಠಡಿ, ವಸತಿ ಗೃಹಗಳು, ಗ್ರಂಥಾಲಯಗಳ ಪರಿವೀಕ್ಷಣೆ ನಡೆಸಿದರು. ಅಲ್ಲಿನ ಸೌಕರ್ಯಗಳ ಸ್ಥಿತಿಗತಿಯ ಬಗ್ಗೆ ಖುದ್ದು ಪರಿಶೀಲಿಸಿದರು.

ವಸತಿ ನಿಲಯದಲ್ಲಿನ ಅಡುಗೆ ತಯಾರಕರೊಂದಿಗೆ ಮಾತನಾಡಿ, ಆಹಾರವನ್ನು ಶುಚಿಯಾಗಿ ಮತ್ತು ಗುಣಮಟ್ಟದ ರೀತಿಯಲ್ಲಿ ಸಿದ್ಧಪಡಿಸಲು ಸಲಹೆ ಮಾಡಿದರು. ಅಡುಗೆದಾರರು ತಯಾರಿಸಿದ್ದ ಉಪಹಾರವನ್ನು ಸೇವಿಸುವ ಮೂಲಕ ಆಹಾರದ ಗುಣಮಟ್ಟ ಪರೀಕ್ಷಿಸಿದರು. ಇದೆ ವೇಳೆ ಕಾರ್ಯದರ್ಶಿಗಳು ವಸತಿ ನಿಲಯದಲ್ಲಿದ್ದ ವಿದ್ಯಾರ್ಥಿಗಳೊಂದಿಗೆಅವರವಿದ್ಯಾಭ್ಯಾಸದ ಬಗ್ಗೆ ಚರ್ಚಿಸಿದರು. ಸರ್ಕಾರವು ಬಡ ಮಕ್ಕಳ ಒದಿಗಾಗಿ ಸಾಕಷ್ಟು ಅನುದಾನ ಖರ್ಚು ಮಾಡುತ್ತಿದ್ದು ವಿದ್ಯಾರ್ಥಿಗಳು ಇದನ್ನರಿತು ಅಧ್ಯಯನ ಮಾಡಬೇಕು. ಬಡ ಪಾಲಕರು ತಮ್ಮ ಮಕ್ಕಳು ಓದಿ ಬುದ್ಧಿವಂತರಾಗಬೇಕು ಎಂದು ಮಕ್ಕಳನ್ನು ಕಷ್ಟಪಟ್ಟು ವಸತಿ ನಿಲಯಗಳಿಗೆ ಕಳುಹಿಸುತ್ತಾರೆ. ಮಕ್ಕಳ ಬಗ್ಗೆ ಅವರು ಸಾಕಷ್ಟು ಕನಸುಗಳನ್ನು ಕಟ್ಟಿರುತ್ತಾರೆ. ವಸತಿ ನಿಲಯದಲ್ಲಿನ ವಿದ್ಯಾರ್ಥಿಗಳು ಇದನ್ನು ಮನಸಿನಲ್ಲಿಟ್ಟುಕೊಂಡು ಸರಿಯಾಗಿ ಅಧ್ಯಯನ ಮಾಡಬೇಕು ಎಂದು ಸಲಹೆ ಮಾಡಿದರು.

ವಿದ್ಯಾರ್ಥಿಗಳು ಸತತ ಅಧ್ಯಯನ ಮಾಡಬೇಕು. ಕಡಿಮೆ ಅಂಕಗಳು ಬಂದಾಗ ಕುಗ್ಗಬಾರದು. ಸೋಲನ್ನೇ ಗೆಲುವಿನ ಮೆಟ್ಟಿಲನ್ನಾಗಿಸಿಕೊಳ್ಳಬೇಕು. ಈಗಿನಿಂದಲೇ ಸ್ಪರ್ಧಾತ್ಮಕ ಪರೀಕ್ಷೆ ತಯಾರಿ ಮಾಡಬೇಕು. ದಿನಕ್ಕೆ ಕನಿಷ್ಟ 8 ಗಂಟೆಗಳ ಕಾಲ ಅಧ್ಯಯನ ಮಾಡಬೇಕು. ಪ್ರತಿ ಎರಡು ಗಂಟೆ ಮಧ್ಯೆ ತುಸು ಹೊತ್ತು ವಿರಾಮ ಪಡೆದು ಮತ್ತೆ ಓದನ್ನು ಮುಂದುವರೆಸಬೇಕು. ವಿರಾಮದ ಸಮಯದಲ್ಲಿ ಓದಿದ ವಿಷಯವನ್ನು ಮನನ ಮಾಡಬೇಕು. ಸರಿಯಾಗಿ ನಿದ್ರೆ ಆರೋಗ್ಯದ ಕಡೆಗೂ ಗಮನ ಹರಿಸಬೇಕು ಎಂದು ಕಾರ್ಯದರ್ಶಿಗಳು ವಸತಿ ನಿಲಯದಲ್ಲಿನ ವಿದ್ಯಾರ್ಥಿಗಳಿಗೆ ಸಲಹೆ ಮಾಡಿದರು.

**ಅಧಿಕಾರಿಗಳಿಗೆ ಸೂಚನೆ :** ಕುಕನೂರಿನ ಸಮಾಜ ಕಲ್ಯಾಣ ಇಲಾಖೆಯ ಡಾ.ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ ಹಾಗೂ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳ ಅವಶ್ಯಕತೆಗೆ ತಕ್ಕಂತೆ ವಸತಿ ಗೃಹಗಳ, ಶೌಚಾಲಯ ಹಾಗೂ ಸ್ನಾನದ ಕೊಠಡಿಗಳ ಅವಶ್ಯಕತೆ ಇದೆ ಎಂದು ಅಧಿಕಾರಿಗಳು ಕಾರ್ಯದರ್ಶಿಗಳ ಗಮನಕ್ಕೆ ತಂದರು. ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಕೂಡಲೇ ವರದಿಯನ್ನು ಸಿದ್ಧಪಡಿಸಿ ಸಲ್ಲಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳಲು ನಿರ್ದೇಶಿಸಿದರು.

# ಸಾಮಾಜಿಕ ಕ್ರಾಂತಿಯ ಹರಿಕಾರ ಹಡಪದ ಅಪ್ಪಣ್ಣ: ಶಿವಾನಂದ ಹಡಪದ




**ವಿಜಯಪುರ :** ಹನ್ನೆರಡನೇ ಶತಮಾನದ ವಚನ ಚಳವಳಿ ಮತ್ತು ಸಾಮಾಜಿಕ ಕ್ರಾಂತಿಯ ಹರಿಕಾರರಲ್ಲಿ ಒಬ್ಬರಾದ ಹಡಪದ ಅಪ್ಪಣ್ಣನವರು 250 ಕ್ಕೂ ಅಧಿಕ ವಚನಗಳನ್ನು ರಚಿಸಿ ಸಮಾಜಕ್ಕೆ ಮಾದರಿಯಾಗಿದ್ದಾರೆ ಎಂದು ಸಿಂದಗಿ ಹಡಪದ ಅಪ್ಪಣ್ಣ ವಿವಿಧೋದ್ದೇಶಗಳ ಸಹಕಾರಿ ಸಂಘದ ಅಧ್ಯಕ್ಷ ಶಿವಾನಂದ ಹಡಪದ ಅಭಿಪ್ರಾಯಪಟ್ಟಿದ್ದಾರೆ.

ಜಿಲ್ಲಾ, ತಾಲೂಕ ಹಾಗೂ ನಗರ ಘಟಕ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಲಿಂ. ಷಡಕ್ಷರಯ್ಯ ಶಿವಪೂಜಯ್ಯ ಹಿರೇಮಠ ಹಾಗೂ ದಿ. ನಾಗಪ್ಪ ರೇವಪ್ಪ ಶೇತೆ ಇವರ ಹೆಸರಿನ ದತ್ತಿ ನಿಧಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಬಸವಣ್ಣನವರ ಆಪ್ತರಾಗಿ ಮೂಲ ಕಾಯಕವನ್ನು ಮಾಡುತ್ತಾ ಅರ್ಥಪೂರ್ಣ ವಚನಗಳನ್ನು ರಚಿಸುವುದರ ಮೂಲಕ ವಚನಕಾರರಲ್ಲಿ ತಮ್ಮ ವ್ಯಕ್ತಿತ್ವವನ್ನು ಗುರುತಿಸಿಕೊಂಡರು ಎಂದರು.

ಸಭೆಯ ಅಧ್ಯಕ್ಷ ವಹಿಸಿದ ಡಾ. ಜೆ.ಡಿ. ಕೊಟ್ನಾಳ ಮಾತನಾಡಿ, ಮೂಢ ನಂಬಿಕೆ ಅಧ್ಯಯನಕ್ಕೆ ಒಳಪಡಿಸಿ ಶರಣರ ಮಹತಿಯನ್ನು ಸಾರಬೇಕು ಎಂದರು.

ಶರಣರ ಕುರಿತು ಉಪನ್ಯಾಸ ನೀಡಿದ ಕಸಾಪ ಗೌರವ ಕಾರ್ಯದರ್ಶಿ ಡಾ. ಮಾಧವ ಗುಡಿ ಕಾಯಕ ಮತ್ತು ದಾಸೋಹದ ಮೂಲಕ ಸಮ ಸಮಾಜವನ್ನು ನಿರ್ಮಿಸಿದರು. ಜಾತಿ ಲಿಂಗಬೇಧವನ್ನು ಹೋಗಲಾಡಿಸಿ ಸರ್ವರನ್ನು ಪ್ರೀತಿಸಿದ ಶರಣರ ಜೀವನ ನಮಗೆ ಮಾದರಿ ಎಂದರು.

ಸಾನ್ನಿಧ್ಯ ವಹಿಸಿದ ಸಿಂದಗಿಯ ಗುರುದೇವ ಆಶ್ರಯಮದ ಪೂಜ್ಯ ಶಾಂತ ಗಂಗಾಧರ ಸ್ವಾಮೀಜಿ ಮಾತನಾಡಿ,

ಶರಣರು ಯಾವುದೇ ಸ್ಥಾನಮಾನ ಬಯಸದೆ ಸಮಾಜಕ್ಕಾಗಿ ಜೀವನವನ್ನು ಮುಡುಪಾಗಿಟ್ಟರು ಎಂದರು.

ರೇವಣಸಿದ್ದಪ್ಪ ನಾಗಪ್ಪ ಶೇತೆ, ಸತ್ಯಪ್ಪ ಹಡಪದ, ಸಿದರಾಯ ನಾವಿ, ಬಸವರಾಜ ಶಿವಶರಣ, ರಾಜೇಸಾಬ ಶಿವನಗುತ್ತಿ ವೇದಿಕೆಯ ಮೇಲಿದ್ದರು.

ಕಸಾಪ ಜಿಲ್ಲಾ ಅಧ್ಯಕ್ಷ ಹಾಸಿಂಪೀರ ವಾಲಿಕಾರ ಸ್ವಾಗತಿಸಿದರು. ರೇವತಿ ಬೂದಿಹಾಳ ನಿರೂಪಿಸಿದರು. ಸಿದ್ರಾಮಯ್ಯ ಲಕ್ಕುಂಡಿಮಠ ವಂದಿಸಿದರು.

ಕಾರ್ಯಕ್ರಮದಲ್ಲಿ ಕಸಾಪ ಅಧ್ಯಕ್ಷ ಹಾಸಿಂಪೀರ ವಾಲಿಕಾರ, ಗೌರವ ಕಾರ್ಯದರ್ಶಿ ಮಹಮ್ಮದಗೌಸ್ ಹವಾಲ್ದಾರ, ಬಸವರಾಜ ಆಜೂರ, ಸೋಮನಾಥ ನಾವಿ, ಆರ್.ಜಿ. ಕೋಟ್ನಾಳ, ಅಹಮ್ಮದ ವಾಲಿಕಾರ, ಶ್ರೀಕಾಂತ ನಾಡಗೌಡ, ಸಿದ್ರಾಮಪ್ಪ ಜಂಗಮಶೆಟ್ಟಿ, ಅಲಿಸಾಬ ಖಡಕೆ, ಸೋಮನಾಥ ನಾವಿ, ಭಾಗೀರಥಿ ಸಿಂದೆ, ಲತಾ ಗುಂಡಿ, ಗಂಗಮ್ಮ ರೆಡ್ಡಿ, ಆರ್.ಎಂ. ದೊಡಮನಿ, ಸತ್ಯಣ್ಣ ದೊಡಮನಿ, ಎಂ.ಎಲ್. ಜಮಾದಾರ, ಅಮೋಘ, ಸಿದ್ದು ಪೂಜಾರಿ ಮುಂತಾದವರು ಉಪಸ್ಥಿತರಿದ್ದರು.

# ನಂದಿ ಸಕ್ಕರೆ ಕಾರ್ಖಾನೆಗೆ ಸಚಿವ ಎಂ.ಬಿ. ಪಾಟೀಲ ಭೇಟಿ: ಕಾರ್ಖಾನೆ ಪುನಾರಂಭಕ್ಕೆ ಸಚಿವರ ಭರವಸೆ



**ವಿಜಯಪುರ**ನಂದಿಸಹಕಾರಿಸಕ್ಕರೆಕಾರ್ಖಾನೆ ಉಳಿಸಿ ಈ ವರ್ಷದ ಹಂಗಾಮಿನಲ್ಲಿ ಕಬ್ಬು ನುರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಶಕ್ತಿಮೀರಿ ಪ್ರಯತ್ನಿಸುವುದಾಗಿ ಬೃಹತ್ ಮತ್ತುಮಧ್ಯಮಕೈಗಾರಿಕೆ,ಮೂಲಸೌಕರ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಭರವಸೆ ನೀಡಿದ್ದಾರೆ.

ಬಬಲೇಶ್ವರ ತಾಲೂಕಿನ ಕೃ?ಾ?ಣ ನಗರದಲ್ಲಿರುವ ನಂದಿ ಕಾರ್ಖಾನೆಗೆ ಶನಿವಾರ ಭೇಟಿ ನೀಡಿದ ಸಂದರ್ಭದಲ್ಲಿ ಉಪಸ್ಥಿತರಿದ್ದಇಲ್ಲಿನಕಾರ್ಮಿಕರುಕಾರ್ಖಾನೆ ಉಳಿಸಿ ಎಂದು ಕೈಮುಗಿದು ಬೇಡಿಕೊಂಡ ಘಟನೆ ನಡೆಯಿತು. ಈ ಸಂದರ್ಭದಲ್ಲಿ ಅಲ್ಲಿದ್ದವರ ಕರುಳು ಚುರ್ ಎನಿಸಿ ಕಣ್ಣುಗಳು ತೇವಗೊಳ್ಳುವಂತೆ ಮಾಡಿದವು. ಅ??ಟೀ ಅಲ್ಲ, ಈ ಪ್ರಸಂಗ ಕಾರ್ಖಾನೆಯ ಪ್ರಸ್ತುತ ಪರಿಸ್ಥಿತಿಗೆ ಹಿಡಿದ ಕೈಗನ್ನಡಿಯಾಗಿತ್ತು.

ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ರೈತರು, ಕಾರ್ಖಾನೆಯ ಆಡಳಿತ ಮಂಡಳಿ ಪದಾಧಿಕಾರಿಗಳು,ರೈತಮುಖಂಡರುಮತ್ತು ಎಂಜಿನಿಯರಿಂಗ್‌ಕಂಪನಿಅಧಿಕಾರಿಗಳಿಂದ ಪ್ರತ್ಯೇಕವಾಗಿ ಸಭೆ ನಡೆಸಿ ಮಾಹಿತಿ ಪಡೆದ ಸಚಿವರು, ಕಾರ್ಖಾನೆ ಪುನಾರಂಭದ ಹಲವಾರು ಮಾರ್ಗೋಪಾಯಗಳ ಕುರಿತು ಸುದೀರ್ಘ ಚರ್ಚೆ ನಡೆಸಿದರು.

ಈವೇಳೆಮಾತನಾಡಿದನಾನಾಮುಖಂಡರು, ಸಹಕಾರಿ ತತ್ವದಲ್ಲಿ ಪ್ರಾರಂಭವಾದ ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ಗಲಗಲಿ ಭಾಗದ ರೈತರ ಜೀವನಾಡಿಯಾಗಿದೆ. ಕಳೆದ 30 ವರ್ಷಗಳಿಂದ ನಮ್ಮೆಲ್ಲರ ಅಸ್ಮಿತೆಯಾಗಿದ್ದು, ಕೇವಲ ಜೋಳ, ಕಾಳು, ಕಡಿ, ಒಣ ಬೇಸಾಯಕ್ಕೆ ಸೀಮಿತರಾಗಿದ್ದ ಇಲ್ಲಿನ ರೈತರು ಕಾರ್ಖಾನೆ ಪ್ರಾರಂಭವಾದಾಗಿನಿಂದ ಕಬ್ಬು ಬೆಳೆಯುವ ಮೂಲಕ ಸಾಮಾಜಿಕ ಮತ್ತು ಆರ್ಥಿಕವಾಗಿ ಸುಧಾರಿಸುವಂತೆ ಮಾಡಿದೆ. ಆದರೆ, ಇತ್ತೀಚಿಗೆ ಪೈಪೋ?ಟಿ, ಆಡಳಿತ ಮಂಡಳಿಯಲ್ಲಿ ವೃತ್ತಿಪರತೆ ಕೊರತೆ ಹಾಗೂ ಕೆಲವು ನ್ಯೂನ್ಯತೆಗಳಿಂದಾಗಿ ಕಾರ್ಖಾನೆ ಸಂಕಷ್ಟದಸುಳಿಗೆಸಿಲುಕಿದೆ.2017ಯೋಜನೆ ಐಜಾಕ್‌ಪುಣೆಕಂಪನಿಗೆಬಾಯ್ಲರ್‌ಪ್ಯಾಕೇಜ್ ಕಾಮಗಾರಿ ಗುತ್ತಿಗೆ ನೀಡಲಾಗಿತ್ತು. ಆದರೆ, ನಂತರ ಈ ಕಾಮಗಾರಿಯನ್ನು ಪುಣೆಯ ಎಸ್.ಎಸ್. ಎಂಜಿನಿಯರಿಂಗ್ ಕಂಪನಿಗೆ ನೀಡಿದ ನಂತರ 04.03.2023ರಂದು ಬಾಯಲರ್ ಇಎಸ್ಪಿ ಸ್ಫೋಟವಾಗಿ ಮೂರು ಜನ ಸಾವಿಗೀಡಾಗಿದ್ದಾರೆ. ಬಳಿಕ ಅದೇ ಕಂಪನಿ ಬಳಿಕ 04.07.2024 ಬಾಯಲರ್ ಪ್ರಥಮ ಇಎಸ್ಪಿಪ್ರಾಯೋಗಿಕವಾಗಿ ಪ್ರಾರಂಭ ಮಾಡಿತ್ತು. ಆದರೆ, 07.07.2024 ಇಎಸ್ಪಿ ಕುಸಿತವಾಗಿದೆ. ಇದರಿಂದಾಗಿ ರೈತರು ಮತ್ತು ಕಾರ್ಮಿಕರು ಕಾರ್ಖಾನೆಯ ಪುನಾರಂಭದ ಕುರಿತು ಭರವಸೆ ಕಳೆದುಕೊಂಡಿದ್ದಾರೆ. ಕಾರ್ಖಾನೆಯ ಸಾಮರ್ಥ್ಯ ವಿಸ್ತರಣ ಘಟಕ ನಿಗದಿತ ಅವಧಿಯಲ್ಲಿ ಕಾರ್ಯ ಆರಂಭಿಸದ ಕಾರಣ ಬಹುದೊಡ್ಡ ತೊಂದರೆಯಾಗಿದೆ ಎಂದು ಅಳಲು ತೋಡಿಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ಎಂ.ಬಿ. ಪಾಟೀಲ ಅವರು, ಕಾರ್ಖಾನೆ ಪುನಾರಂಭಿಸುವ ಕುರಿತು ಎಲ್ಲ ಕ್ರಮ ಕೈಗೊಳ್ಳಲಾಗುವುದು.ಮುಂದಿನವಾರಎಸ್. ಎಸ್. ಎಂಜಿನಿಯರ್ಸ್ ಅಧಿಕಾರಿಗಳನ್ನು ಬೆಂಗಳೂರಿಗೆಕರೆಯಿಸಿಚರ್ಚಿಸಲಾಗುವುದು ಎಂದು ಭರವಸೆ ನೀಡಿದರು.

ಈಗಾಗಲೇ ಸಚಿವರಾದ ಎಚ್. ಕೆ. ಪಾಟೀಲ, ಆರ್. ಬಿ. ತಿಮ್ಮಾಪುರ, ಶಾಸಕ ಜೆ. ಟಿ. ಪಾಟೀಲ, ಮಾಜಿ ಸಚಿವ ಅಜಯಕುಮಾರ ಸರನಾಯಕ ಮತ್ತಿತರ ಮುಖಂಡರೊಂದಿಗೆ ಸಿಎಂಗೆ ಭೇಟಿಯಾಗಿದ್ದು, ಕಾರ್ಖಾನೆಗೆ ನೆರವಾಗಲು ಮೃದುಸಾಲ ನೀಡುವಂತೆ ಮನವಿ ಸಲ್ಲಿಸಲಾಗಿದೆ ಎಂದು ಕಾರ್ಖಾನೆ ಪದಾಧಿಕಾರಿಗಳು, ಸಿಬ್ಬಂದಿ ಹಾಗೂ ಕಾರ್ಮಿಕರಿಗೆ ಧೈರ್ಯ ತುಂಬಿದರು.

ಅಲ್ಲದೇ, ಈ ಸಭೆಯಲ್ಲಿಯೇ ಪುಣೆಯ ಎಸ್. ಎಸ್. ಎಂಜಿನಿಯರ್ಸ್ ಕಂಪನಿಯ ಮಾಲಿಕ ಎಸ್. ಬಿ. ಬರ್ಡ್ ಅವರ ಜೊತೆ ಮೊಬೈಲಿನಲ್ಲಿ ಮಾತನಾಡಿದ ಸಚಿವರು, ಮುಂಬರುವ ಹಂಗಾಮಿನಲ್ಲಿ ಕಬ್ಬು ನುರಿಸಲು ಅನುಕೂಲ ಮಾಡಿಕೊಡಲು ಕೂಡಲೇ ಸಮಸ್ಯೆ ಬಗೆಹರಿಸಬೇಕು ಎಂದು ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಬೀಳಗಿ ಶಾಸಕ ಜೆ. ಟಿ. ಪಾಟೀಲ, ಕಾರ್ಖಾನೆ ಉಪಾಧ್ಯಕ್ಷ ಎ. ಪಿ. ಲೆಂಕೆಣ್ಣವರ, ನಿರ್ದೇಶಕರಾದ ಎ. ಬಿ. ದೇಸಾಯಿ, ಬಿ. ಡಿ. ಪಾಟೀಲ, ಎಸ್. ಟಿ. ಪಾಟೀಲ ಲಿಂಗನೂರ, ಗುರಲಿಂಗಪ್ಪ ಅಂಗಡಿ,ರಮೇಶ ಜಕರಡ್ಡಿ,ಮುಖಂಡರಾದ ಕೆ. ಎಚ್. ಮುಂಬಾರೆಡ್ಡಿ, ಬಸವರಾಜ ದೇಸಾಯಿ, ಜಿ. ಡಿ. ದೇಸಾಯಿ, ಕಾಳಗಿ ಶೆಟ್ಟರ ಸುತ್ತಮುತ್ತ ಗ್ರಾಮಸ್ಥರು. ಎಸ್. ಎಸ್. ಎಂಜಿನಿಯರ್ ಯೋಜನೆ ಉಪಾಧ್ಯಕ್ಷ ಅನಿರುದ್ಧ ಕುಲಕರ್ಣಿ, ಕಾರ್ಖಾನೆಯ ಪ್ರಧಾನ ವ್ಯವಸ್ಥಾಪಕ ಜಯರಾಮ ಆಚಾರ್ಯ, ಪ್ರಭಾರ ವ್ಯವಸ್ಥಾಪಕ ಎಂ.ಬಿ. ಶೆಟ್ಟಿ, ಮುಖ್ಯ ಲೆಕ್ಕಾಧಿಕಾಧಿಕಾರಿ ಎಸ್.ಬಿ. ಗೋಟಖಿಂಡಿ ಸುತ್ತಮುತ್ತಲಿನ ಗ್ರಾಮಸ್ಥರು ಉಪಸ್ಥಿತರಿದ್ದರು.

# ಇಂಗಳಗೇರಿಯಿಂದ ಪ.ಪೂ. ಶ್ರೀ ಅಕ್ಕಮಹಾದೇವಿ ಪಾದಯಾತ್ರೆ



**ತಾಳಿಕೋಟೆ :** ಇಂಗಳಗೇರಿಯ ಶ್ರೀ ಖಾಸ್ಗತೇಶ್ವರ ಮಠದ ಪ.ಪೂ.ಶಿವಶರಣೆ ಶ್ರೀ ಅಕ್ಕಮಹಾದೇವಿ ತಾಯಿಯು ತಾಳಿಕೋಟೆಯ ಶ್ರೀ ಖಾಸ್ಗತೇಶ್ವರ ಮಠಕ್ಕೆ ಪಾದಯಾತ್ರೆಯ ಮೂಲಕ ಆಗಮಿಸಿ ಶ್ರೀಗಳ ದರ್ಶನಪಡೆದುಕೊಂಡರು.

ರವಿವಾರರಂದು ಮುಂಜಾನೆ 9 ಘಂಟೆಗೆ ಸುಮಾರು 100 ಕ್ಕೂ ಅಧಿಕ ಭಕ್ತಾಧಿಗಳೊಂದಿಗೆ ತಾಳಿಕೋಟೆಗೆ ಆಗಮಿಸಿದ ತಾಯಿಯವರು

ಸುಮಾರು 22 ಕಿಲೋಮೀಟರ್ ಪಾದಯಾತ್ರೆ ಗೈಯುವದರೊಂದಿಗೆ 1 ಘಂಟೆಗೆ ಶ್ರೀ ಖಾಸ್ಗತೇಶ್ವರ ಮಠಕ್ಕೆ ತಲುಪಿ ಸಪ್ತ ಭಜನಾ ಕಾರ್ಯದಲ್ಲಿ ಪಾಲ್ಗೊಂಡರಲ್ಲದೇ ನಂತರ ಶ್ರೀ ಖಾಸ್ಗತ ಗದ್ದುಗೆಯ ದರ್ಶನ ಪಡೆದು ಮಹಾ ಪೂಜೆ ಸಲ್ಲಿಸಿದರು.

ಇಂಗಳಗೇರಿಯಿಂದ ಆಗಮಿಸುವ ಮಾರ್ಗ ಮಧ್ಯ ಮೂಕೀಹಾಳ ಗ್ರಾಮದಲ್ಲಿ ಕೆ.ಎಚ್.ಪಾಟೀಲ ಅವರು ತಮ್ಮ ಗ್ರಾಮದ ಸುಮಂಗಲೇಯರಿಂದ ಸ್ವಾಗತಿಸಿದರು. ನಂತರ ಶ್ರೀ ಮಠದ ಬಾಲಶಿವಯೋಗಿ ಶ್ರೀ ಸಿದ್ದಲಿಂಗ ದೇವರು ದರ್ಶನ ಪಡೆದು ಆಶಿರ್ವಾದ ಪಡೆದುಕೊಂಡರಲ್ಲದೇ ಇವರೊಂದಿಗೆ ಆಗಮಿಸಿದ ಸಮಸ್ತ ಭಕ್ತಸಮೂಹಕ್ಕೂ ಶ್ರೀಗಳು ಆಶೀರ್ವದಿಸಿದರು. ನಂತರ ಭಕ್ತಾದಿಗಳು ಶ್ರೀಮಠದಲ್ಲಿ ಮಹಾಪ್ರಸಾದ ಸೇವಿಸಿ ಪುನಿತರಾದರು. ಈ ತಾಯಿಯ ನೇತೃತ್ವದಲ್ಲಿ ಕೈಗೊಂಡ ಪಾದಯಾತ್ರೆಯಲ್ಲಿ ಬಸನಗೌಡ ಮೇಟಿ, ಲಕ್ಷ್ಮೀಬಾಯಿ ಕರಡ್ಡಿ, ನೀಲಮ್ಮ ಪೊಲೇಸಿ, ಸರೋಜನಿ ಅಂಗಡಗೇರಿ, ಭೀಮಣ್ಣ ಪೂಜಾರಿ, ಅಮ್ಮಕ್ಕ ಗರಡ್ಡಿ, ಬಸಮ್ಮ ಹೊಸಮನಿ, ಸಿದ್ದಯ್ಯ ಹಿರೇಮಠ, ಸುವರ್ಣಾ ಬಿರಾದಾರ, ಒಳಗೊಂಡು ಮಹಿಳೆಯರುಹಾಗೂಪುರುಷರುಪಾಲ್ಗೊಂಡಿದ್ದರು.

# ಖಾಸ್ಗತೇಶ್ವರ ಗದ್ದುಗೆ ದರ್ಶನ ಪಡೆದ ಶಾಸಕ ರಾಜುಗ–



**ತಾಳಿಕೋಟೆ :** ಪಟ್ಟಣದ ಶ್ರೀ ಖಾಸ್ಗತೇಶ್ವರ ಮಠಕ್ಕೆ ರವಿವಾರರಂದು ದೇವರ ಹಿಪ್ಪರಗಿ ಮತಕ್ಷೇತ್ರದ ಶಾಸಕ ರಾಜುಗೌಡ ಪಾಟೀಲ(ಕುದರಿಸಾಲವಾಡಗಿ) ಅವರು ಬೆಟ್ಟಿ ನೀಡಿ ಶ್ರೀ ಖಾಸ್ಗತೇಶ್ವರರ ಹಾಗೂ ವಿರಕ್ತಶ್ರೀಗಳ ಗದ್ದುಗೆಯ ದರ್ಶನ ಪಡೆದರಲ್ಲದೇ ಶ್ರೀಮಠದ ಬಾಲಶಿವಯೋಗಿ ಶ್ರೀ ಸಿದ್ದಲಿಂಗ ದೇವರಿಂದ ಆಶಿರ್ವಾದ ಪಡೆದುಕೊಂಡರು.

ಶ್ರೀ ಖಾಸ್ಗತೇಶ್ವರ ಮಠದ ಜಾತ್ರೋತ್ಸವವು ಪ್ರಾರಂಭಗೊಂಡಿದ್ದರಿಂದಮಠಕ್ಕೆಬೆಟ್ಟಿನೀಡಿದಶಾಸಕ ರಾಜುಗೌಡ ಪಾಟೀಲ ಅವರು ಗುಪ್ತ ಕಾಣಿಕೆಯನ್ನು ಶ್ರೀಮಠಕ್ಕೆ ಅರ್ಪಿಸಿದರಲ್ಲದೇ ಬಾಲಶಿವಯೋಗಿ ಶ್ರೀ ಸಿದ್ದಲಿಂಗ ದೇವರನ್ನು ಶಾಲು ಹೊದಿಸಿ ಸನ್ಮಾನಿಸಿ ಗೌರವಿಸಿದರು.

ಇದೇ ಸಮಯದಲ್ಲಿ ಶ್ರೀಗಳು ಸಹ ಶಾಸಕ ರಾಜುಗೌಡರನ್ನು ಗೌರವಿಸಿದರಲ್ಲದೇ ಪ್ರಸಾದವನ್ನು ನೀಡಿ ಶ್ರೀಖಾಸ್ಗತರು ಮತ್ತು ವಿರಕ್ತಶ್ರೀಗಳು ತಮ್ಮ ಜನಪರವಾದ ಕಾರ್ಯಗಳಿಗೆ ಶಕ್ತಿ ನೀಡಲಿ ಮುಂದಿನ ದಿನಗಳಲ್ಲಿ ಒಳ್ಳೆಯ ಭವಿಷ್ಯವನ್ನು ಕಲ್ಪಿಸಲಿ ಎಂದು ಆಶಿಸಿ ಆಶೀರ್ವದಿಸಿದರು.

ಈ ಸಮಯದಲ್ಲಿ ಶ್ರೀಮಠದ ಉಸ್ತುವಾರಿ ವೇ. ಮುರುಘೇಶ ವಿರಕ್ತಮಠ, ಜೆಡಿಎಸ್ ತಾಲೂಕಾ ಅಧ್ಯಕ್ಷ ಮಡುಸಾಹುಕಾರ ಬಿರಾದಾರ, ರಾಮು ಗುತ್ತಿಹಾಳ, ಹುಸೇನಬಾಷಾ, ಸಾಹೇಬಗೌಡ ಬೊಮ್ಮನಹಳ್ಳಿ, ಮೊದಲಾದವರು ಉಪಸ್ಥಿತರಿದ್ದರು.

# ಮೊಬೈಲ್ ಆ್ಯಪ್ ಮೂಲಕ ಬೆಳೆ ಸಮೀಕ್ಷೆ ಮಾಹಿತಿ ದಾಖಲಿಸಲು ರೈತರಿಗೆ ಸೂಚನೆ

**ಕೊಪ್ಪಳ :** ರೈತರು ಬೆಳೆದ ಬೆಳೆಗಳ ಬಗ್ಗೆ ನಿಖರವಾಗಿ ಮಾಹಿತಿ ಪಡೆದುಕೊಳ್ಳಲು ಈಗಾಗಲೇ ಇ-ಆಡಳಿತ ವತಿಯಿಂದ ಅಭಿವೃದ್ಧಿಪಡಿಸಿರುವ ಮೊಬೈಲ್ ಆ್ಯಪ್ ಮೂಲಕ ಬೆಳೆ ಸಮೀಕ್ಷೆ ನಡೆಸುವ ಉದ್ದೇಶದಿಂದಜಿಲ್ಲೆಯಲ್ಲಿಜೂನ್22ರಿಂದ ಮುಂಗಾರುಬೆಳೆಸಮೀಕ್ಷೆಆರಂಭವಾಗಿದ್ದು, ರೈತರು ತಮ್ಮ ಹೊಲಗಳಲ್ಲಿ ಬೆಳೆದ ಬೆಳೆಗಳ ವಿವರ ದಾಖಲಿಸಲು ಆಂಡ್ರಾಯ್ಡ್ ಆ್ಯಪ್ ಮೂಲಕ ವಿವರಗಳನ್ನು ತಾವೇ ಸ್ವತಃ ಮೊಬೈಲ್ ತಂತ್ರಾಂಶದ ಮೂಲಕ ದಾಖಲಿಸಬಹುದಾಗಿದೆ.

ಪೂರ್ವ ಮುಂಗಾರು ಬೆಳೆಗಳ ಮಾಹಿತಿ ದಾಖಲಿಸಲು ಜುಲೈ 22 ಕೊನೆಯ ದಿನವಾಗಿದ್ದು, ರೈತರು ತಮ್ಮ ಮೊಬೈಲ್ ನಲ್ಲಿ ಗೂಗಲ್ ಪ್ಲೇಸ್ಟೋರ್ ನಿಂದ ಬೆಳೆ ಸಮೀಕ್ಷೆ ಮುಂಗಾರು ಹಂಗಾಮಿನ Crop Survey Kharif 2024 ಆ್ಯಪ್ ನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಅಥವಾ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿಕೊಂಡು ಆ್ಯಪ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಬೆಳೆ ವಿವರ ದಾಖಲಿಸಬಹುದಾಗಿದೆ.

Farmer Kharif App 2024-25

ಬೆಳೆ ಸಮೀಕ್ಷೆದತ್ತಾಂಶ ಮಾಹಿತಿಯನ್ನು ಬೆಳೆ ವಿಸ್ತರಣೆ ಎಣಿಕೆ ಕಾರ್ಯದಲ್ಲಿ, ಬೆಳೆ ಕಟಾವು ಪ್ರಯೋಗದಲ್ಲಿ, ಪ್ರಕೃತಿ ವಿಕೋಪ ಸಂದರ್ಭದಲ್ಲಿ, ಬೆಳೆಹಾನಿ ವರದಿ ಸಿದ್ದಪಡಿಸಲು, ಬೆಳೆ ವಿಮಾ ಯೋಜನೆ, ಬೆಂಬಲ ಬೆಲೆ ಯೋಜನೆ, ಆರ್‌ಟಿಸಿ ಯಲ್ಲಿ ಬೆಳೆ ವಿವರ ದಾಖಲಿಸಲು, ರಾಷ್ಟ್ರೀಯ ಹಾಗೂ ಗ್ರಾಮೀಣ ಬ್ಯಾಂಕ್‌ಗಳಲ್ಲಿ ಬೆಳೆ ಸಾಲ ಮಂಜೂರು ಮಾಡಲು ಬೆಳೆ ಸಮೀಕ್ಷೆ ಮಾಹಿತಿಯನ್ನು ಉಪಯೋಗಿಸಲಾಗುತ್ತಿದ್ದು, ಜಿಲ್ಲೆಯಲ್ಲಿ 4,34,326ಬೆಳೆತಾಕುಗಳಿದ್ದು,ಈತಾಕುಗಳಿಗೆ ರೈತರು ಬೆಳೆಗಳ ಮಾಹಿತಿಯನ್ನು ಸ್ವಯಂ ದಾಖಲಿಸಬೇಕೆಂದು ವಿನಂತಿಸಲಾಗಿದೆ.

ರೈತರು ಸ್ವತಃ ತಾವೇ ಬೆಳೆ ಸಮೀಕ್ಷೆ ಆ್ಯಪ್ ಮೂಲಕ ತಾವು ಬೆಳೆದ ಬೆಳೆಗಳ ಮಾಹಿತಿ ನಿಖರವಾಗಿ ನೀಡಬಹುದಾಗಿದೆ. ಇದ–ರಿಂದ ಮುಂಬರುವ ವ್ಯತ್ಯಾಸವನ್ನು ತಡೆಯಬಹುದಾಗಿದೆ. ಈಗಾಗಲೇ ಗ್ರಾಮವಾರು ಖಾಸಗಿ ನಿವಾಸಿಗಳನ್ನು ನೇಮಿಸಲಾಗಿದ್ದು, ಇವರ ಸಹಾಯ ಪಡೆದು ಮಾಹಿತಿ ಅಪ್‌ಲೋಡ್ ಮಾಡಬಹುದಾಗಿದ್ದು, ರೈತರು ಬೆಳೆ ಸಮೀಕ್ಷೆ ಕೈಗೊಳ್ಳಲು ಹೆಚ್ಚಿನ ಮಾಹಿತಿ ಬೇಕಾದಲ್ಲಿ ಪಿ.ಆರ್ ಗಳನ್ನು / ಕೃಷಿ / ತೋಟಗಾರಿಕೆ / ಕಂದಾಯ ಇಲಾಖೆಯ ಸಿಬ್ಬಂದಿಗಳನ್ನು ಸಂಪರ್ಕಿಸಬಹುದು ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮದ ಸಾಲ, ಸೌಲಭ್ಯಕ್ಕೆ ಅರ್ಜಿ ಆಹ್ವಾನ

**ಕೊಪ್ಪಳ**ಕರ್ನಾಟಕಆರ್ಯವೈಶ್ಯಸಮುದಾಯ ಅಭಿವೃದ್ಧಿ ನಿಗಮದಿಂದ 2024–25ನೇ ಸಾಲಿನಲ್ಲಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಗಳಡಿ ಸಾಲ–ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಅಭ್ಯರ್ಥಿಗಳು ಸಾಮಾನ್ಯ ವರ್ಗದಲ್ಲಿ ಆರ್ಯ ವೈಶ್ಯ ಸಮುದಾಯಕ್ಕೆ ಸೇರಿರಬೇಕು. ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನಮೂನೆ–ಜಿ ಯಲ್ಲಿ ಪಡೆದಿರಬೇಕು (ಪ್ರಮಾಣ ಪತ್ರವು ಚಾಲ್ತಿಯಲ್ಲಿರಬೇಕು). ಅರ್ಜಿದಾರರು ಕರ್ನಾಟಕ ರಾಜ್ಯದವರಾಗಿರಬೇಕು ಹಾಗೂ ಅವರ ಖಾಯಂ ವಿಳಾಸವು ಕರ್ನಾಟಕ ರಾಜ್ಯದಲ್ಲಿರಬೇಕು. ಅರ್ಜಿದಾರರು ತಮ್ಮ ಆಧಾರ್ ಸಂಖ್ಯೆಗೆ ತಮ್ಮ ಮೊಬೈಲ್ ಸಂಖ್ಯೆಯನ್ನು ಜೋಡಣೆ ಮಾಡಿರಬೇಕು. ಅರ್ಜಿದಾರರು ತಮ್ಮ ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆಯನ್ನು ಸೀಡ್ ಮಾಡಿಸಿರಬೇಕು. ಆಯ್ಕೆ ಮಾಡುವಾಗ ಮಹಿಳೆಯರಿಗೆ ಶೇ.33ರಷ್ಟು, ವಿಕಲಚೇತನರಿಗೆ ಶೇ.5 ಹಾಗೂ ತೃತೀಯ ಲಿಂಗಳಿಗೆ ಶೇ.5ರ ಮೀಸಲಾತಿ ಇರಿಸಿದೆ. ಒಂದು ಕುಟುಂಬದಲ್ಲಿ ಒಬ್ಬರು ಮಾತ್ರ ಸಾಲ ಸೌಲಭ್ಯ ಪಡೆಯಲು (ಅರಿವು ಶೈಕ್ಷಣಿಕ ಸಾಲ ಯೋಜನೆಯಲ್ಲಿ ಮಾತ್ರ ಇಬ್ಬರಿಗೆ ಅವಕಾಶ) ಅರ್ಹರಾಗಿರುತ್ತಾರೆ.ಸ್ವಯಂ–ಉದ್ಯೋಗ ನೇರ ಸಾಲ ಯೋಜನೆಯ ಸೌಲಭ್ಯಕ್ಕಾಗಿ ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ 3 ಲಕ್ಷ ರೂ.ಗಳ ಮಿತಿಯೊಳಗಿರಬೇಕು. ಅರ್ಜಿದಾರರು 18 ವರ್ಷ ಮೇಲ್ಪಟ್ಟು 55 ವರ್ಷದ ಒಳಗಿನವರಾಗಿರಬೇಕು.ಈಯೋಜನೆಯಲ್ಲಿ 1 ಲಕ್ಷ ರೂ.ಗಳ ಸಾಲ ಒದಗಿಸಲಾಗುವುದು. ಈ ಮೊತ್ತದಲ್ಲಿ ಶೇ.20 ರಷ್ಟು ಸಹಾಯಧನ ಹಾಗೂ ಶೇ.80ರಷ್ಟು ಸಾಲವನ್ನು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಮಂಜೂರು ಮಾಡಲಾಗುವುದು. 2 ತಿಂಗಳ ವಿರಾಮ ಅವಧಿ ಇರುತ್ತದೆ. ನಂತರ ಸಾಲವನ್ನು 34 ಮಾಸಿಕಕಂತುಗಳಲ್ಲಿಮರುಪಾವತಿಸಬೇಕು. ಬ್ಯಾಂಕ್‌ಗಳಸಹಯೋಗದೊಂದಿಗೆಆರ್ಯ ವೈಶ್ಯ ಆಹಾರ ವಾಹಿನಿ ಯೋಜನೆಯ ಸೌಲಭ್ಯಕ್ಕೆ ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಮತ್ತು ನಗರ ಪ್ರದೇಶದವರಿಗೆ 6 ಲಕ್ಷ ರೂ.ಗಳ ಮಿತಿಯೊಳಗಿರಬೇಕು. ಅರ್ಜಿದಾರರು 21 ವರ್ಷ ಮೇಲ್ಪಟ್ಟು 55 ವರ್ಷದ ಒಳಗಿನವರಾಗಿರಬೇಕು. ಅಭ್ಯರ್ಥಿಯು ಎಲ್ಲೊ ಬೋರ್ಡ್ (ಎಲೆಕ್ಟ್ರಿಕ್, ಸಿ.ಎನ್.ಜಿ) ತ್ರೀಚಕ್ರ ವಾಹನ ಅಥವಾ ನಾಲ್ಕು ಚಕ್ರದ ವಾಹನವನ್ನು ಖರೀದಿಸಲು ನಿಗಮದಿಂದ ರೂ.1ಲಕ್ಷದವರೆಗೆ ಸಾಲ ನೀಡಲಾಗುವುದು. ಬಾಕಿ ಮೊತ್ತವನ್ನು ಯಾವುದಾದರು ಬ್ಯಾಂಕ್ ಗಳಿಂದ ಸಾಲ ಪಡೆಯಬೇಕಾಗಿರುತ್ತದೆ. ವಾಹನವನ್ನು ಆಹಾರ ವಾಹಿನಿಯನ್ನಾಗಿ ಪರಿವರ್ತಿಸಿದ್ದಲ್ಲಿ ಮಾತ್ರ ಎರಡನೇ ಕಂತಿನ ಮೊತ್ತ ರೂ.1 ಲಕ್ಷಗಳ ಸಬ್ಸಿಡಿಯನ್ನು ನೇರವಾಗಿ ಫಲಾನುಭವಿಗೆ ಡಿ.ಬಿ.ಟಿ ಮೂಲಕ ಬಿಡುಗಡೆ ಮಾಡಲಾಗುವುದು.

ವಾಸವಿ ಜಲಶಕ್ತಿ ಯೋಜನೆಯಡಿ 2 ರಿಂದ 15 ಎಕರೆ ಕೃಷಿ ಭೂಮಿ ಹೊಂದಿರುವವರಿಗೆ ನೀರಾವರಿಸೌಲಭ್ಯವನ್ನುಒದಗಿಸಲುಸಾಲ–ಸಹಾಯಧನವನ್ನು ನೀಡಲಾಗುವುದು. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಮತ್ತು ನಗರ ಪ್ರದೇಶದವರಿಗೆ 6 ಲಕ್ಷ ರೂ.ಗಳ ಮಿತಿಯೊಳಗಿರಬೇಕು. ಅರ್ಜಿದಾರರು 21 ವರ್ಷ ಮೇಲ್ಪಟ್ಟು 55 ವರ್ಷದ ಒಳಗಿನವರಾಗಿರಬೇಕು.ಈಯೋಜನೆಯಡಿ ಗರಿಷ್ಠ 2 ಲಕ್ಷ ರೂ.ಗಳ ಸಾಲವನ್ನು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಒದಗಿಸಲಾಗುವುದು ಹಾಗೂ ವಿದ್ಯುದೀಕರಣಕ್ಕಾಗಿ 50,000 ರೂ.ಗಳ ಸಹಾಯಧನ ನೀಡಲಾಗುವುದು. 6 ತಿಂಗಳ ವಿರಾಮಾವಧಿ ಇರುತ್ತದೆ ನಂತರ ಸಾಲವನ್ನು 34 ಮಾಸಿಕ ಕಂತುಗಳಲ್ಲಿ ಮರುಪಾವತಿಸಬೇಕು.

ಅರಿವು ಶೈಕ್ಷಣಿಕ ಸಾಲ ಯೋಜನೆಯಲ್ಲಿ ಸಿ.ಇ.ಟಿ./ಎನ್.ಇ.ಇ.ಟಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವೃತ್ತಿಪರ ಕೋರ್ಸ್ ಹಾಗೂ ಪಿ.ಹೆಚ್.ಡಿನಲ್ಲಿ ವ್ಯಾಸಂಗ ಮಾಡುವ ಆರ್ಯ ವೈಶ್ಯ ವಿದ್ಯಾರ್ಥಿಗಳಿಗೆ ವಾರ್ಷಿಕ 1 ಲಕ್ಷ ರೂ.ಗಳ ಸಾಲವನ್ನು ಶೇ.2ರ ಬಡ್ಡಿದರದಲ್ಲಿ ಶೈಕ್ಷಣಿಕ ಸಾಲ ನೀಡಲಾಗುವುದು. ವ್ಯಾಸಂಗ ಪೂರ್ಣಗೊಂಡ ನಂತರ 04 ತಿಂಗಳ ವಿರಾಮಾವಧಿ ಇರುತ್ತದೆ. ನಂತರ ಸಾಲವನ್ನು 36 ಮಾಸಿಕ ಕಂತುಗಳಲ್ಲಿ ಮರುಪಾವತಿಸಬೇಕು. ಅರ್ಜಿದಾರರು 18 ವರ್ಷ ಮೇಲ್ಪಟ್ಟು 35 ವರ್ಷದ ಒಳಗಿನವರಾಗಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಮತ್ತು ನಗರ ಪ್ರದೇಶದವರಿಗೆ 6 ಲಕ್ಷ ರೂ.ಗಳ ಮಿತಿಯೊಳಗಿರಬೇಕು. ಈ ಯೋಜನೆಗೆ ಸಂಬಂಧಪಟ್ಟಂತೆ ಸಿ.ಇ.ಟಿ ಪರೀಕ್ಷೆಯ ಕೌನ್ಸಲಿಂಗ್ ಮುಗಿದ ನಂತರ ಅರ್ಜಿಗಳನ್ನು ಸ್ವೀಕರಿಸಲಾಗುವುದು.

ಅರ್ಜಿ ಸಲ್ಲಿಸಲು ಅಗಷ್ಟ್ 31 ಕೊನೆಯ ದಿನವಾಗಿದ್ದು, ನಿಗಮದ ಸಹಾಯವಾಣಿ: 94484 51111 ಗೆ (ಬೆಳಿಗ್ಗೆ:10.00 ರಿಂದ ಸಂಜೆ:5.30 ವರೆಗೆ) ಸಂಪರ್ಕಿಸಬಹುದಾಗಿದೆ. ಯೋಜನೆಗಳ ಮಾರ್ಗಸೂಚಿಗಳು, ಸಲ್ಲಿಸಬೇಕಾದ ದಾಖಲೆಗಳು, ಜಿಲ್ಲಾ ವ್ಯವಸ್ಥಾಪಕರ ಕಚೇರಿ ಜಿಲ್ಲಾ ಆಡಳಿತ ಭವನ ಜಿಲ್ಲಾ ಸಂಪರ್ಕೀರ್ಣ ಹೊಸಪೇಟೆ ರಸ್ತೆ ಕೊಪ್ಪಳ ಇಲ್ಲಿಗೆ ಭೇಟಿ ನೀಡಬಹುದು. ಅರ್ಜಿ ಸಲ್ಲಿಕೆಗೆ ಅಥವಾ ಇತರ ವಿವರಗಳನ್ನು http://www.kacdc.karnataka.gov.in ಇಲ್ಲಿ ತಿಳಿಯಬಹುದಾಗಿದೆ ಎಂದು ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮದ ಕೊಪ್ಪಳ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂಗಮೇಶಗೆ ಹೆಚ್ಚೆಚ್ಚು ಉನ್ನತ ಹುದ್ದೆ ದೊರೆಯಲಿ: ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹಾರೈಕೆ



**ವಿಜಯಪುರ :** ಸಂಗಮೇಶ ಬಬಲೇಶ್ವರ ಈ ನಾಡಿನ ಒಬ್ಬ ಸೃಜನಶೀಲ ಯುವ ನಾಯಕನಾಗಿದ್ದು, ಅವರಂಥ ಅತ್ಯುತ್ತಮ ವಾಗ್ಮಿ ವಿದ್ಯಾವಂತ ವಿಧಾನ ಪರಿಷತ್ತಿನಲ್ಲಿ ಇರಬೇಕೆನ್ನುವುದು ಶ್ರೀಪೀಠದ ಆಶಯವಾಗಿತ್ತು. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಾಗೂ ಸಚಿವರಾದ ಎಂ.ಬಿ. ಪಾಟೀಲ, ಲಕ್ಷ್ಮಿ ಹೆಬ್ಬಾಳ್ಕರ್ ಅವರು ಮಕ್ಕಳ ಬಗೆಗಿನ ಅವರ ಕಳಕಳಿಯನ್ನು ಗುರುತಿಸಿ ಕರ್ನಾಟಕ ಬಾಲ ವಿಕಾಸ ಅಕಾಡೆಮಿಯ ಅಧ್ಯಕ್ಷರನ್ನಾಗಿ ನೇಮಿಸಿದ್ದು ನಮ್ಮೆಲ್ಲರಿಗೂಸಂತೋಷವನ್ನುಂಟುಮಾಡಿದೆಎಂದು ಪಂಚಮಸಾಲಿ ಸಮುದಾಯದ ಪ್ರಥಮ ಜಗದ್ಗುರು ಪರಮಪೂಜ್ಯ ಶ್ರೀ ಬಸವ ಜಯಮೃತ್ಯುಂಜಯ ಮಹಾಸ್ವಾಮಿಗಳು ಹರ್ಷ ವ್ಯಕ್ತಪಡಿಸಿದ್ದಾರೆ. ಇಂದು ತಮಗೆ ಸನ್ಮಾನಿಸಿ ಆಶೀರ್ವಾದ ಪಡೆದ ಪಂಚಮಸಾಲಿ ಸಮುದಾಯದ ರಾಷ್ಟ್ರೀಯ ವಕ್ತಾರರು ಆಗಿರುವ ಕರ್ನಾಟಕ ಬಾಲ ವಿಕಾಸ ಅಕಾಡೆಮಿ ನೂತನ ಅಧ್ಯಕ ಸಂಗಮೇಶ ಬಬಲೇಶ್ವರ ಅವರನ್ನು ಸನ್ಮಾನಿಸಿ ಆಶೀರ್ವದಿಸಿ ಅವರು ಮಾತನಾಡಿದರು.

ಸಂಗಮೇಶ ಬಬಲೇಶ್ವರ ಈ ನಾಡಿನ ಭವಿಷ್ಯದ ಯುವ ನಾಯಕರಾಗಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಾಗೂ ಎಂ.ಬಿ ಪಾಟೀಲರು ಮುಂಬರುವ ದಿನಗಳಲ್ಲಿ ಸಂಗಮೇಶ ಅವರಿಗೆ ವಿಧಾನಪರಿಷತ್ತಿಗೆ ಅವಕಾಶ ಮಾಡಿಕೊಡಬೇಕೆನ್ನುವದು ನಮ್ಮೆಲ್ಲರ ಅಪೇಕ್ಷೆಯಾಗಿದೆ ಎಂದರು.

ಈ ಸಂದರ್ಭದಲ್ಲಿ ಪ್ರಥಮ ದರ್ಜೆ ಗುತ್ತಿಗೆದಾರ ಬಿ.ಎಸ್. ಬಿರಾದಾರ, ಮುಖಂಡರಾದ ಸೋಲಾಪುರ ಮೊದಲಾದವರು ಉಪಸ್ಥಿತರಿದ್ದರು.

# ರಾಜ್ಯದಲ್ಲಿ ಕಾಂಗ್ರೆಸ್ ಬಲಿಷ್ಠವಾಗುತ್ತಿದೆ: ಸತೀಶ್ ಜಾರಕಿಹೊಳಿ



**ಬೆಂಗಳೂರು :** ರಾಜ್ಯದಲ್ಲಿ ಕಾಂಗ್ರೆಸ್ ಬಲಿಷ್ಠವಾಗುತ್ತಿದೆ ಎಂಬುದಕ್ಕೆ ವಿಧಾನಸಭೆ ಮತ್ತುಲೋಕಸಭೆಚುನಾವಣೆಫಲಿತಾಂಶಗಳೇ ಸಾಕ್ಷಿ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆಗಿರುವ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ.

ಕ್ವೀನ್ಸ್ ರಸ್ತೆಯಲ್ಲಿರುವ ಕೆಪಿಸಿಸಿ ಕೇಂದ್ರ ಕಚೇರಿ ಆವರಣದಲ್ಲಿ ಮಂಗಳವಾರ ಕೆಪಿಸಿಸಿ ಪರಿಶಿಷ್ಟ ವಿಭಾಗ ರಾಜ್ಯ ಕಚೇರಿಯನ್ನು ಉದ್ಘಾಟಿಸಿಮಾತನಾಡಿದಅವರು,ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ರಾಜ್ಯದಲ್ಲಿ ಉತ್ತಮ ಸಂಘಟನೆ ಮಾಡಿದ್ದಾರೆ. ಇದರ ಪ್ರತಿಫಲವಾಗಿ ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಆಡಳಿಕ್ಕೆ ಬಂದಿದ್ದಲ್ಲದೆ, ಕಳೆದ ಲೋಕಸಭೆ ಚುನಾವಣೆಯಲ್ಲಿ ಹೆಚ್ಚು ಸ್ಥಾನಗಳನ್ನು ಗಳಿಸುವಂತಾಯಿತು. ಅದರಲ್ಲೂ ಪರಿಶಿಷ್ಟ ವಿಭಾಗದ ಮತದಾರರನ್ನು ಹೆಚ್ಚಿನ ಪ್ರಮಾಣದಲ್ಲಿಸೆಳೆಯುವಲ್ಲಿಕೆಪಿಸಿಸಿಪರಿಶಿಷ್ಟ ವಿಭಾಗ ಯಶಸ್ವಿಯಾಗಿದೆ ಎಂದರು.

ಇತ್ತೀಚೆಗೆಬೀಳುತ್ತಿರುವಭಾರೀಮಳೆಯಿಂದ ರಾಜ್ಯಾದ್ಯಂತ ರಸ್ತೆ, ಸೇತುವೆಗಳು ಹಾನಿಗೊಳಗಾಗಿವೆ. ಎಷ್ಟು ಹಾನಿಯಾಗಿದೆ ಎಂಬ ಬಗ್ಗೆ ಸರ್ವೇ ನಡೆಸಿ ವರದಿ ಸಲ್ಲಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಹಾನಿಗೊಳಗಾಗಿರುವ ರಸ್ತೆ ಮತ್ತು ಸೇತುವೆಗಳನ್ನು ಆದ್ಯತೆ ಮೇಲೆ ಶೀಘ್ರವೇ ದುರಸ್ತಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಮಹಾರಾಷ್ಟ್ರದ ಮಾಜಿ ಸಚಿವರು ಹಾಗೂ ಅಖಿಲಭಾರತಪರಿಶಿಷ್ಟವಿಭಾಗದರಾಷ್ಟ್ರೀಯ ಅಧ್ಯಕ್ಷರಾದ ಶಿವಾಜಿ ರಾವ್ ಮೋಗೆ ಅವರು ಮಾತನಾಡಿ, ದೇಶದಲ್ಲಿ ಪರಿಶಿಷ್ಟ ಸಮುದಾಯದ 6 ಕೋಟಿ ಜನಸಂಖ್ಯೆ ಇದೆ. ವಿಧಾನಸಭೆ, ಲೋಕಸಭೆ ಮಾತ್ರವಲ್ಲದೆ, ನಗರ ಮತ್ತು ಪಂಚಾಯತ್ ರಾಜ್ ಸ್ಥಳೀಯ ಸಂಸ್ಥೆಗಳಲ್ಲೂ ಈ ಸಮುದಾಯಕ್ಕೆ ಅತಿ ಹೆಚ್ಚು ಪ್ರಾತಿನಿಧ್ಯನೀಡಿದಪಕ್ಷಎಂದರೆಅದುಕಾಂಗ್ರೆಸ್ ಮಾತ್ರ. ಹೀಗಾಗಿಯೇ ಈ ಸಮುದಾಯದ ಜನನಮ್ಮೊಂದಿಗಿದ್ದಾರೆಎಂದರು.ಸಂವಿಧಾನ ಬದ್ಧವಾಗಿ ಕಾರ್ಯನಿರ್ವಹಿಸುತ್ತಿರುವ ಕಾಂಗ್ರೆಸ್, ಸಂವಿಧಾನ ರಕ್ಷಣೆಗೆ ಪ್ರಥಮ ಆದ್ಯತೆ ನೀಡುತ್ತಿದೆ. ಇತ್ತೀಚೆಗೆ ಸಂಸತ್ ಅಧಿವೇಶನದ ಸಂದರ್ಭದಲ್ಲಿ ಸಂಸದರು ಸಂವಿಧಾನದಪುಸ್ತಕವನ್ನುಕೈಯ್ಯಲ್ಲಿಹಿಡಿದು ಪ್ರಮಾಣ ವಚನ ಸ್ವೀಕರಿಸುವ ಮೂಲಕ ಸಂವಿಧಾನದ ಮೇಲಿನ ಕಾಂಗ್ರೆಸ್ ನ ಬದ್ಧತೆಯನ್ನು ಮತ್ತೊಮ್ಮೆ ಎತ್ತಿಹಿಡಿದಿದ್ದಾರೆ ಎಂದು ತಿಳಿಸಿದರು.

ಪರಿಶಿಷ್ಟ ವಿಭಾಗ ರಾಜ್ಯಾಧ್ಯಕ್ಷರಾದ ಎಂ.ವಿಜಯನಾಯಕ್ ಮಾತನಾಡಿ, ಸಮಾಜದ ಎಲ್ಲಾ ವರ್ಗ, ಧರ್ಮದವರಿಗೆ ಸರಿಸಮಾನ ಅವಕಾಶ ಕೊಟ್ಟು ಜಾತ್ಯತೀತ ರಾಷ್ಟ್ರ ನಿರ್ಮಾಣದಲ್ಲಿ ಕಾಂಗ್ರೆಸ್ ಮಹತ್ವದ ಕೊಡುಗೆ ನೀಡಿದೆ ಎಂದರಲ್ಲದೆ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ ಪಂಚಗ್ಯಾರಂಟಿಯೋಜನೆಗಳಿಂದಪರಿಶಿಷ್ಟ ಪಂಗಡದಸಮುದಾಯಶ್ರೇಯೋಭಿವೃದ್ಧಿಗೆ ಅನುಕೂಲವಾಗಿದೆ ಎಂದು ತಿಳಿಸಿದರು.

ಮುಂಬರುವ ಬಿಬಿಎಂಪಿ ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳು ಹಾಗೂ ನಿಗಮ,ಮಂಡಳಿನೇಮಕಾತಿಯಲ್ಲಿಪರಿಶಿಷ್ಟ ಸಮುದಾಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಮುಖ್ಯಮಂತ್ರಿಗಳಾದಸಿದ್ದರಾಮಯ್ಯರವರು ಮತ್ತು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ರವರಿಗೆ ಮನವಿ ಮಾಡಲಾಗುವುದು ಎಂದು ಹೇಳಿದರು.

# ಯುವಜನತೆಯಲ್ಲಿ ಪ್ರಜ್ಞಾವಂತಿಕೆಯನ್ನು ಬೆಳೆಸುವುದೇ ಶಿಕ್ಷಣ: ವಿಷ್ಣು ಶಿಂಧೆ



**ವಿಜಯಪುರ :** ಯುವ ಜನತೆಯಲ್ಲಿ ಪ್ರಜ್ಞಾವಂತಿಕೆಯನ್ನು ಬೆಳೆಸುವುದೇ ಶಿಕ್ಷಣ ಎಂದು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದ ಮುಖ್ಯಸ್ಥ ಡಾ. ವಿಷ್ಣು ಶಿಂಧೆ ಹೇಳಿದರು.

ಭಾರತೀಯ ಶಿಕ್ಷಣ ಮಂಡಲ ಹಾಗೂ ದಿ ಪ್ರೆಸಿಡೆನ್ಸಿ ಶಿಕ್ಷಣ ಮಹಾವಿದ್ಯಾಲಯ ವಿಜಯಪುರದಲ್ಲಿ "ಭಾರತೀಯ ಶಿಕ್ಷಣದಲ್ಲಿ ಮಹಿಳೆಯರ ಪಾತ್ರ" ಕುರಿತು ಉಪನ್ಯಾಸ ನೀಡಿದರು.

ಶಾಂತಿನಿಕೇತನ ಸಂಸ್ಥೆ ಹಾಗೂ ಭಾರತೀಯ ಶಿಕ್ಷಣ ಮಂಡಲದ ಉಪಾಧ್ಯಕ್ಷೆ ಡಾ. ಶೀಲಾ ಬಿರಾದಾರ ಅವರು ಅತಿಥಿಗಳಾಗಿ ಮಾತನಾಡಿ, ಸಮಾಜದ ಅಭಿವೃದ್ಧಿಯಲ್ಲಿ ಸಂಸ್ಕೃತಿ ಮತ್ತು ಸಂಸ್ಕಾರ ಬಹು ಮುಖ್ಯ ಎಂದು ನುಡಿದರು.

ದಿ ಪ್ರೆಸಿಡೆನ್ಸಿ ಶಿಕ್ಷಣ ಮಹಾ ವಿದ್ಯಾಲಯದ ಪ್ರಾಚಾರ್ಯ ಡಾ. ಎಸ್.ಟಿ. ಬೋಳರೆಡ್ಡಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ದೇಶದ ಅಭಿವೃದ್ಧಿಗಾಗಿ ಮಹಿಳೆಯರನ್ನು ಶಿಕ್ಷಣ ಆರೋಗ್ಯ ಮತ್ತು ಆತ್ಮ ವಿಶ್ವಾಸಯುತ ಶಿಕ್ಷಣವನ್ನು ನೀಡುವುದು ಬಹು ಮುಖ್ಯ ಎಂದು ಹೇಳಿದರು.

ಭಾರತೀಯ ಶಿಕ್ಷಣ ಮಂಡಲದ ಜಿಲ್ಲಾ ಕಾರ್ಯದರ್ಶಿ ಮಲ್ಲಿಕಾರ್ಜುನ ಗುಡ್ಡದ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿಜಯಪುರ ಜಿಲ್ಲಾ ಭಾರತೀಯ ಶಿಕ್ಷಣ ಮಂಡಲ ಅಧ್ಯಕ್ಷ ಬಿ.ಎಸ್. ಬಾಪುಗೌಡ ಸ್ವಾಗತಿಸಿದರು. ರಶ್ಮಿ ನೇಗಿನಾಳ ನಿರೂಪಿಸಿದರು. ಡಾ. ಶಾರದಾ ವಂದಿಸಿದರು. ಸಹ್ಯಾದ್ರಿ ಕಲಾ ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯದ ಉಪನ್ಯಾಸಕರು ಮತ್ತು ಪ್ರಶಿಕ್ಷಣಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಆಶಾಕಾರ್ಯಕರ್ತೆಯರ ಪರಿಶ್ರಮ ತುಂಬಾ ಮುಖ್ಯವಾದು: ಡಿಹೆಚ್‌ಓ ಜಯಶ್ರೀ ಎಮ್ಮಿ



**ಮುಧೋಳ :** ನಗರದ ತಾಲ್ಲೂಕು ವೈದ್ಯಾಧಿಕಾರಿಗಳ ಆವರಣದಲ್ಲಿ ಆಶಾ ಕಾರ್ಯಕರ್ತರ ಸಮ್ಮೇಳನವನ್ನು ಉದ್ಘಾಟಿಸಿಮಾತನಾಡಿದಜಿಲ್ಲಾವೈದ್ಯಾಧಿಕಾರಿಗಳಾದ. ಡಾ॥ ಜಯಶ್ರೀ ಎಮ್ಮಿ ಮಾತನಾಡಿ ರಾಜ್ಯದಲ್ಲಿ ಬಾಗಲಕೋಟ ಜಿಲ್ಲೆಯೂ 31ನೇ ಸ್ಥಾನದಿಂದ 7 ನೇ ಸ್ಥಾನಕ್ಕೆ ಬರುವಲ್ಲಿ ಆಶಾಕರ್ಯಕರ್ತೆಯರ ಪರಿಶ್ರಮ ತುಂಬಾ ಮುಖ್ಯವಾದುದಾಗಿದೆ. ರಾಜ್ಯದಲ್ಲಿ ಈಗಾಗಲೇ ಡೆಂಗ್ಯೂ ಬೆಳೆಯುತ್ತಿದೆ. ಇದನ್ನೂ ಕೂಡಾ ನಾವೆಲ್ಲಾ ಒಟ್ಟಾಗಿ ಎದುರಿಸೋಣ ಎಂದರು. ಇಲಾಖೆಯಿಂದಸಿಗುವಎಲ್ಲಾಸೌಲಭ್ಯಗಳನ್ನುಜನರಿಗೆ ತಲುಪಬೇಕಿದೆಮತ್ತುನಮ್ಮಆಶಾಕಾರ್ಯಕರ್ತೆಯರೂ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದರು. ನಿಮ್ಮ ಬೇಡಿಕೆಗಳು ಇಡೇರಲಿ, ನಿಮ್ಮನ್ನೂ ನೌಕರರೆ-ಂದು ಪರಿಗಣಿಸುವಂತಾಗಲಿ ಎಂದು ಹಾರೈಸಿದರು. ಮನುಷ್ಯತ್ವ ಮಾಯಗೊಳ್ಳುತ್ತಿದೆ. ಹೃದಯಗಳು ಕಲ್ಲಾಗುತ್ತಿವೆ ಆದರೆ ಗುಡಿಯಲ್ಲಿನ ಮೂರ್ತಿಗಳು ಬಂಗಾರವಾಗುತ್ತಿವೆ ಹಾಗಾಗಿ ನಾವು ಮಾನವೀಯ ಮೌಲ್ಯಗಳನ್ನು ಬೆಳೆಸುವತ್ತ ಗಮನ ಹರಿಸೋಣ ಎಂದು ಹೇಳಿದರು.

ತಾಲ್ಲೂಕು ವೈದ್ಯಾಧಿಕಾರಿಗಳಾದ. ವೆಂಕಟೇಶ ಮಲಘಾಣ ಮಾತನಾಡಿ ಆಶಾ ಕಾರ್ಯಕರ್ತೆಯರು ಯಾವುದೋ ಪಿ.ಎಚ್.ಸಿಯ ಆಧಾರ ಸ್ಥಂಭ ವಾಗದೇ ಅವರು ಇಡೀ ರಾಜ್ಯದ ಆರೋಗ್ಯ ಇಲಾಖೆಯ ಆಧಾರ ಸ್ತಂಭವಾಗಿದ್ದಾರೆ ನಮ್ಮ ಆಶಾ ಕಾರ್ಯಕರ್ತೆಯರು ತುಂಬಾಸ್ವಾಭಿಮಾನಿಗಳುಅವರಜೀವನಏಳ್ಗೆಯಾಗಲಿ ಅವರ ಕಷ್ಟಗಳು ದೂರಾಗಲಿ ಎಂದು ಹಾರೈಸಿದರು. ಮೇಲಾಧಿಕಾರಿಗಳು, ಕುಟುಂಬ, ಮತ್ತು ಸಮಾಜದ ಒತ್ತಡದಲ್ಲಿಯೂಶ್ಲಾಘನೀಯರೀತಿಯಲ್ಲಿಕೆಲಸವನ್ನು ಮಾಡುತ್ತಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಡಾ. ಯಲ್ಲಪ್ಪ ಭಾವಿಮನಿರವರುಮಾತನಾಡಿಕಾರ್ಮಿಕರುಮಾತ್ರವೇ ನೈತಿಕವಾಗಿ ಸಮಾಜಕ್ಕಾಗಿ ಕೆಲಸಮಾಡುವವರು ಅವರಿಗೆ ಇಲ್ಲ ಸಲ್ಲದ ಬಯಕೆಗಳಿಗಿಂತ ವಾಸ್ತವಿಕ ಬದುಕಿನ ಅವಶ್ಯಕತೆಗಳಿಗೆ ಕೆಲಸ ಮಾಡುತ್ತಾರೆ. ಅಧಿಕಾರಶಾಹಿಗಳುಮತ್ತುರಾಜಕರಾಣಿಗಳುಆಶ್ವಾಸನೆ ನೀಡುತ್ತಿದ್ದಾರೆ ಹೊರತು ಬೇಡಿಕೆಗಳು ಇಡೇರಿಸುತ್ತಿಲ್ಲ ಹಾಗಾಗಿ ಆಶಾಕಾರ್ಯಕರ್ತೆಯರು ಸಂಘಟಿತರಾಗಿ ಹೋರಾಡಬೇಕು ಎಂದರು. ಇಂಥ ಹೋರಾಟಗಳು ಸಾಮಾಜದಲ್ಲಿನ ಮೂಲಭೂತ ಬದಲಾವಣೆಗೆ ಪೂರಕವಾಗಲಿ, ಕಾರ್ಮಿಕಕರ ಹಿತಕಾಪಾಡುವ ರಾಜ್ಯ ಸ್ಥಾಪನೆಯಾಗಲಿ, ಕೇವಲ ಪ್ರಶಂಸೆಗೆ ಮರಳಾಗದೆ ಒಂದಾಗಿ ಹೋರಾಡಿ ಬೇಡಿಕೆ ಇಡೇರಿಸಿಕೊಳ್ಳಬೇಕಿದೆ ಎಂದರು.

AIUTUC ಯ ಜಿಲ್ಲಾ ಅಧ್ಯಕ್ಷರಾದ ಮಲ್ಲಿಕಾರ್ಜುನ ಹೆಚ್.ಟಿ ಮಾತನಾಡಿ ಆಶಾಕಾರ್ಯಕರ್ತೆಯರಿಗೆ ಸರಕಾರ ಸೂಕ್ತ ಸಂಬಳ ನೀಡುತ್ತಿಲ್ಲ. ಇದುವರೆಗೆ ಅಧಿಕಾರಕ್ಕೆ ಬಂದಿದ್ದ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಎಲ್ಲಾ ಪಕ್ಷಗಳು ಕಾರ್ಮಿಕರಿಗೆ ದ್ರೋಹ ಬಗೆಯುತ್ತಲೆ ಬಂದಿವೆ ಎಂದರು.

ಆಗಮಿಸಿದ ತಾಲ್ಲೂಕು ಆಶಾ ಮೆಂಟರ್ ....... ಹಾಗು ಸಭೆಯ ಆರಂಭದಲ್ಲಿ ಎ.ಐ.ಯು.ಟಿ.ಯು.ಸಿ.ಯ ಸಂಸ್ಥಾಪನಾಅಧ್ಯಕ್ಷರಾದಕಾಮ್ರೇಡ್‌ಶಿವದಾಸ್‌ಘೋಷ್ ರವರ ಭಾವ ಚಿತ್ರಕ್ಕೆ ಮಾಲಾರ್ಪಣೆ ಮಾಡಲಾಯಿತು. ವಿವಿಧ ಸಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಈ ಸಮ್ಮೇಳನದಲ್ಲಿ ಆಶಾ ಜಿಲ್ಲಾಧ್ಯಾಕ್ಷರಾದ ಕಾ॥ ರುಕ್ಷನಾ ನಾಗಠಾನ , ಆಶಾ ಜಿಲ್ಲಾ ಸಂಘಟನಾಕಾರರಾದ , ಕಾ॥ ಶೀಲಾ ಮೆಳ್ಳಿಗೇರಿ ನೂತನ ಸಮಿತಿಯನ್ನು ಚುನಾಯಿದಲಾಯಿತು ತಾಲೂಕಾ ಅಧ್ಯಕ್ಷರಾಗಿ ಕಾ॥ ವಾಸಂತಿ ಪೂಜಾರಿ ಉಪಾಧ್ಯಕ್ಷರಾಗಿ ಲಕ್ಮೀ ಜಾದವ ,ರೇಣುಕಾ ಬಜಂತ್ರಿ, ಬೋರಮ್ಮ ತುಪ್ಪದ ದಾನಮ್ಮ ವಜ್ರಮಟ್ಟಿ, ಕಾರ್ಯಧರ್ಶಿಯಾಗಿ ಕಾ॥ ಮಂಜುಳಾ ಸಿಡ್ಲವಗೋಳ,ಜಂಟಿಕಾರ್ಯಧರ್ಶಿಯಾಗಿರೇಣುಕಾ ಜುನೋಜಿ ದುರ್ಗವ್ವ 18 ಜನ ಆಶಾಗಳು ಸದಸ್ಯರಾಗಿ ಆಯ್ಕೆಯಾದರು. ಈ ಸಂದರ್ಭದಲ್ಲಿ ತಾಲೂಕಾ ಸಾರ್ವಜನಿಕಆಸ್ಪತ್ರೆಯಮೂಖ್ಯವೈದ್ಯಾಧಿಕಾರಿಗಳಾದ ಡಾ ಅಶೋಕ ಸೂರ್ಯವಂಶಿ. ಮಳಲಿ ಪ್ರಾ ಆ ಕೇ ವೈದ್ಯಾಧಿಕಾರಿಗಳಾದ ಡಾ॥ ಕ್ರಾಂತಿ ಲೋಕ್ರೆ ಡಾ॥ ಸುನಿತಾ ಕಾಮರೆಡ್ಡಿ ,ಹಲಗಲಿ ಪ್ರಾ ಆ ಕೇ ಡಾ॥ ಸಚಿನ ಮಾನೆ,ಮೇಟಗುಡ್ಡ ಪ್ರಾ ಆ ಕೇ ಡಾ॥ ಸಚೀನ ಶ್ಯಾಮಸುಂದರ ಕಸಬಾ ಜಂಬಗಿ. ಎಐಯುಟಿಯುಸಿ ಸಂಘಟನಾಕಾರರಾದ ಭರತಕುಮಾರ ಹೆಚ್ ಟಿ ,ಕರ್ನಾಟಕ ರಾಜ್ಯ ಸಂಯುಕ್ತ ಅಂಗನವಾಡಿ ಜಿಲ್ಲಾ ಕಾರ್ಯಧರ್ಶಿಯಾದ,ಕಮಲಾ ತೇಲಿ, ತಾಲೂಕ ಆರೋಗ್ಯ ಇಲಾಖೆಯ ಕಾರ್ಯಾಲಯದ ಸಿಬ್ಬಂದಿಗಳಾದ.ಎಚ್‌ಎಲ್‌ಕುಳ್ಳೊಳ್ಳಿ.ಆಶಾ ಮೆಂಟರ್ ಜ್ಯೋತಿ ಕದಂ ಹಾಗೂ ತಾಲೂಕಿನ ಎಲ್ಲಾ ಆಶಾ ಕಾರ್ಯಕರ್ತೆಯರು ಮತ್ತು ಇನ್ನು ಮುಂತಾದವರು ಉಪಸ್ಥಿತರಿದ್ದರು.

# ಬಿಜೆಪಿ ನನ್ನ ಹಿರಿತನ, ಅನುಭವ ಬಳಸಿಕೊಳ್ಳಲಿಲ್ಲ: ರಮೇಶ ಜಿಗಜಿಣಗಿ

ವರದಿ:ಲಾಲಸಾಬ ಸವಾರಗೋಳ.

**ವಿಜಯಪುರ :** ದೇಶಾದ್ಯಂತ ದಲಿತರ ವಿರೋಧದ ಮಧ್ಯೆಯೂ ಜನತಾ ಪರಿವಾರ ತೊರೆದು ಬಿಜೆಪಿ ಸೇರಿದ ರಾಜಕೀಯದಲ್ಲಿ ಹಿರಿಯನಾದ ನನ್ನನ್ನು ಬಿಜೆಪಿ ಸರಿಯಾಗಿ ಬಳಸಿಕೊಳ್ಳಲಿಲ್ಲ. ಇದಕ್ಕಾಗಿ ನನಗೆ ಬೇಸರವಿದೆ. ವೈಯಕ್ತಿಕವಾಗಿ ನೋವಾಗಿದೆ ಎಂದು ಬಿಜೆಪಿ ಹಿರಿಯ ಸಂಸದ ರಮೇಶ ಜಿಗಜಿಣಗಿ ಪಕ್ಷದ ನಡೆಯ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.




ಸತತಏಳನೇಬಾರಿಗೆಲೋಕಸಭೆಗೆ ಆಯ್ಕೆಯಾಗಿ ಸಂಸತ್ ಪ್ರವೇಶಿಸುತ್ತಿರುವ ಸಂದರ್ಭದಲ್ಲಿ ವಿಜಯಪುರ ಜಿಲ್ಲಾ ಬಿಜೆಪಿ ಪಕ್ಷ ಹಮ್ಮಿಕೊಂಡಿದ್ದ ಸನ್ಮಾನ ಹಾಗೂ ಕಾರ್ಯಕರ್ತರಿಗೆ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಬಿಜೆಪಿ ಪಕ್ಷ ನನ್ನ ಹಿರಿತನವನ್ನು, ಅನುಭವವನ್ನು ಬಳಕೆ ಮಾಡಿಕೊಳ್ಳಲಿಲ್ಲ. ಒಬ್ಬರೂ ನನ್ನ ಏನು ಮಾಡಬೇಕೆಂದು ಕೇಳಲಿಲ್ಲ ಎಂದು ಕೇಂದ್ರ ಸರ್ಕಾರದಲ್ಲಿ ತಮಗೆ ಸಚಿವ ಸ್ಥಾನ ಸಿಗದಿರುವುದಕ್ಕೆ ಬೇಸರ ವ್ಯಕ್ತಪಡಿಸಿದರು.

ದಲಿತನಾದ ನನ್ನನ್ನು ಜಿಲ್ಲೆಯ ಜನ ಅಭಿಮಾನದಿಂದ ಬೆಂಬಲ ನೀಡಿ ಗೆಲ್ಲಿಸಿಕೊಂಡು ಬರುತ್ತಿರುವುದು ನನ್ನ ಜೀವನದ ಪುಣ್ಯ. ಕೆಲವರು ಚುನಾವಣೆ ಇದ್ದಾಗ ನಾಲ್ಕು ದಿನ ಓಡಾಡಿಮರೆಯಾಗುತ್ತಾರೆ.ಆದರೆ ನಾನು ಭಾವನಾತ್ಮಕವಾಗಿ ಪಕ್ಷದ ಕಾರ್ಯಕರ್ತರ ಜೊತೆಗೆ ಕೆಲಸ ಮಾಡುತ್ತೇನೆ ಎಂದರು.

ನನ್ನ ರಾಜಕಾರಣ ಅಷ್ಟು ಸುಲಭವಲ್ಲ. ನಾನು ಸುಲಭವಾಗಿ ರಾಜಕಾರಣ ಬಿಡಲ್ಲ. ಜಿಲ್ಲೆಯ ಜನರ ಆಶೀರ್ವಾದದಿಂದ ಈವರೆಗೆ ರಾಜಕೀಯದಲ್ಲಿ ನಾನು ಇತಿಹಾಸ ನಿರ್ಮಿಸುತ್ತಲೇ ಬಂದಿದ್ದು, ಮುಂದೆ ಗುರಿ ಇದೆ ಹಿಂದೆ ದೇವರಿದ್ದಾನೆ ಎಂದರು.

ಯಾರಾದರೂ ಅಳಿಸಬಹುದು ಎಂದು ದೇವರು ನನ್ನ ಹಣೆ ಬರಹವನ್ನು ಹಣೆಯಲ್ಲಿ ಬರೆಯದೇ ಬೆನ್ನ ಮೇಲೆ ಬರೆದಿದ್ದಾನೆ. ಮುಂದೆ ಏನೋ ಆಗಲಿದೆ. ಏನು ಎಂಬುದನ್ನು ಈಗಲೇಹೇಳಲ್ಲಎನ್ನುವಮೂಲಕ ಪರೋಕ್ಷವಾಗಿ ಪಕ್ಷದ ನಾಯಕರಿಗೆ ಎಚ್ಚರಿಕೆಯನ್ನೂ ನೀಡಿದ್ದಾರೆ.

ನಾನು ಬಿಜೆಪಿ ಪಕ್ಷ ಸೇರ್ಪಡೆ ಸಂದರ್ಭದಲ್ಲಿ ದೇಶದ ಎಲ್ಲಾ ರಾಜ್ಯದಲ್ಲಿರುವದಲಿತನಾಯಕರು ಬಿಜೆಪಿ ಸೇರ್ಪಡೆ ಬೇಡವೆಂದು ಆಕ್ಷೇಪಿಸಿದ್ದರು.ಆದರೆನಾನುಬಿಜೆಪಿ ಸೇರುತ್ತೇನೆ ಎಂದು ಪ್ರಮೋದ ಮಹಾಜನ್, ಅನಂತ್ ಕುಮಾರ ಹಾಗೂ ಅಂದು ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ವೆಂಕಯ್ಯ ನಾಯ್ಡು ಅವರಿಗೆ ಮಾತು ಕೊಟ್ಟಿದ್ದೆ ಎಂಬ ಕಾರಣಕ್ಕೆ ಬಿಜೆಪಿ ಸೇರಿದೆ ಎಂದು ವಿವರಿಸಿದರು.

ಜನತಾಪರಿವಾರದಹಿನ್ನೆಲೆಯಿಂದ ಬಂದಿರುವ ನಾನು ರಾಮಕೃಷ್ಣ ಹೆಗಡೆ, ಜೆ. ಎಚ್. ಪಟೇಲ್ ಅವರ ಗರಡಿಯಲ್ಲಿ ಬೆಳೆದವನು. ಬಿಜೆಪಿ ಪಕ್ಷದವರು ಆಗಲೇ ನನ್ನನ್ನು ಪಕ್ಷ ಸೇರ್ಪಡೆಗೆ ಆಹ್ವಾನಿಸಿದ್ದರೂ ಹೆಗಡೆ-ಪಟೇಲ್ ಇರುವವರೆಗೂ ಬಿಜೆಪಿ ಸೇರಲ್ಲ ಎಂದಿದ್ದೆ. ಅವರು ಇಲ್ಲದ ಬಳಿಕ ನಿಮ್ಮ ಬಳಿ ಬರುತ್ತೇನೆ ಎಂದುಕೊಟ್ಟಮಾತಿನಂತೆದಲಿತರ ವಿರೋಧದ ಮಧ್ಯೆಯೂ ಬಿಜೆಪಿ ಸೇರಿದೆ ಎಂದು ವಿವರಿಸಿದರು.

2004 ರಲ್ಲಿ ರಾಮಕೃಷ್ಣ ಹೆಗಡೆ ಅವರು ನಿಧನರಾದ ಬಳಿಕ ಆಗ ವಿಧಾನಸಭೆವಿಪಕ್ಷನಾಯಕರಾಗಿದ್ದ ಜಗದೀಶ್ ಶೆಟ್ಟರ್ ಅವರ ಮನೆಗೆ ಹೋಗಿ ಬಿಜೆಪಿ ಸೇರುತ್ತೇನೆ ಎಂದೆ. ಬಳಿಕ ಯಡಿಯೂರಪ್ಪ, ಅನಂತಕುಮಾರ ಅವರನ್ನು ಭೇಟಿಯಾದೆ. ಅಂತಿಮವಾಗಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ವೆಂಕಯ್ಯ ನಾಯ್ಡು ಸಮ್ಮುಖದಲ್ಲಿ ಬಿಜೆಪಿ ಸೇರ್ಪಡೆಯಾದೆ ಎಂದು ತಮ್ಮ ಬಿಜೆಪಿ ಸೇರ್ಪಡೆಯ ಹಿಂದಿನ ಘಟನೆ ವಿವರಿಸಿದರು.

ಈವರೆಗೆ ಸತತ ಏಳು ಬಾರಿ ಲೋಕಸಭೆ ಚುನಾವಣೆಯಲ್ಲಿ ಗೆದ್ದಿರುವ ದಕ್ಷಿಣ ಭಾರತದ ದಲಿತ ನಾಯಕನಾದ ನನ್ನನ್ನು ಬಿಜೆಪಿ ಪಕ್ಷದಲ್ಲಿ ಯಾರೂ ಏತಕ್ಕೂ ಕೇಳುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದ ಜಿಗಜಿಣಗಿ, ನಾನು ಯಾರ ಮೈಮೇಲೆ ಬಿದ್ದು ಏನೂ ಹೇಳಲಿಲ್ಲ. ಇದಕ್ಕಾಗಿ ಯಾರ ಮನೆಗೂ ಹೋಗಲಿಲ್ಲ , ಯಾರ ಹಿಂದೆಯೂ ಅಲೆದಿಲ್ಲ. ರಾಜಕೀಯಜೀವನದಲ್ಲೇಅಂತಹ ಚಟ ನನಗೆ ಇಲ್ಲ ಎಂದರು.

ಇತ್ತ ಪಕ್ಷದವರೂ ಇಂಥ ಕೆಲಸ ಮಾಡು ಎಂದು ನನಗೆ ಯಾರೂ ಏನನ್ನೂ ಹೇಳಲಿಲ್ಲ. ಕೆಲಸ ಕೊಡಿ ಎಂದು ನಾನೂ ಯಾರ ಬೆನ್ನು ಬೀಳಲಿಲ್ಲ. ಅವರೆಲ್ಲ ಇವನು ವಿಚಿತ್ರ ಮನುಷ್ಯ ಎಂದುಕೊಂಡರು. ನಾನು ಇರುವುದೇ ಹಾಗೆ, ನಾನು ಅಧಿಕಾರಕ್ಕಾಗಿ ಯಾರ ಮನೆ ಬಾಗಿಲಿಗೆ ಹೋಗಿಲ್ಲ, ಕೇಳಿಲ್ಲ ಎಂದರು.

ನರೇಂದ್ರಮೋದಿಅವರುಮೊದಲ ಬಾರಿಗೆ ಪ್ರಧಾನಿ ಆಗಿದ್ದಾಗ ನನ್ನ ಮೇಲೆ ವಿಶ್ವಾಸವಿಟ್ಟು ಮೂರು ವರ್ಷ ಕೇಂದ್ರದಲ್ಲಿ ಸಚಿವನನ್ನಾಗಿ ಮಾಡಿದ್ದರು. ಅದನ್ನು ಬಿಟ್ಟು ಯಾವುದಕ್ಕೂ ನನ್ನನ್ನು ಮಾತನಾಡಿಸಲಿಲ್ಲ. ಆದರೂ ನಾನು ಪಕ್ಷವನ್ನು ಬಿಟ್ಟು ಕೊಟ್ಟಿಲ್ಲ ಎಂದರು.

ಇಷ್ಟಕ್ಕೂ ನನ್ನ ನಿರ್ಲಕ್ಷ್ಯ ಮಾಡಿದ್ದರಿಂದ ನನಗೆ ಹಾನಿಯಾಗಿಲ್ಲ.ಹಾನಿಆಗಿರುವುದು ಬಿಜೆಪಿ ಪಕ್ಷಕ್ಕೆ. ಈತ ಸಂಘ ಪರಿವಾರದ ಹಿನ್ನೆಲೆಯವನಲ್ಲ ಎಂಬ ಕಾರಣಕ್ಕೆ ಪಕ್ಷದ ಕೆಲಸ ಕಾರ್ಯದಲ್ಲಿಬಳಸಿಕೊಳ್ಳಲಿಲ್ಲ. ಈ ಬಾರಿ ಕೇಂದ್ರದ ಮಂತ್ರಿ ಮಂಡಲ ರಚನೆ ಸಂದರ್ಭದಲ್ಲೂ ರಾಜ್ಯದ ಯಾವೊಬ್ಬ ನಾಯಕರೂ ಪ್ರಧಾನಿ ನರೇಂದ್ರ ಮೋದಿ ಅವರಿಗೆ ನನ್ನ ಹೆಸರು ಹೇಳಲಿಲ್ಲ. ಇದು ನನಗೆ ಬಹಳಷ್ಟುನೋವುತರಿಸಿದೆಎಂದು ಭಾವುಕರಾದರು.

ಸುದೀರ್ಘ ರಾಜಕೀಯ ಜೀವನದಲ್ಲಿ ನಾನು ಎಂದೂ ಅಧಿಕಾರ, ಹಣ ಬಯಸಿಲ್ಲ. ಚುನಾವಣೆ ಸಂದರ್ಭದಲ್ಲೂ ನಾನು ಸಾಕಷ್ಟು ಸಹಿಸಿಕೊಂಡು ಬಂದೆ. ಅನ್ಯ ಸಮಾಜದವರು ನನ್ನನ್ನು ಪ್ರೀತಿ ಮಾಡಿದರೂ, ನನ್ನ ಜನರೇ ನನ್ನನ್ನು ಪ್ರೀತಿಸಲಿಲ್ಲ ಎಂದುನೋವುಹೊರಹಾಕಿದರು. ಈ ಬಾರಿಯ ಚುನಾವಣೆ ಸಂದರ್ಭದಲ್ಲಿ ವಿಚಿತ್ರವಾದ ಸನ್ನಿವೇಶ ಎದುರಿಸಿದ್ದೇನೆ. ಅನಾರೋಗ್ಯಕ್ಕೀಡಾಗಿ ಆಸ್ಪತ್ರೆಯಿಂದ ಬಿಡುಗಡೆಯಾದ ಕೂಡಲೇ ಚುನಾವಣೆ ಕಣಕ್ಕೆ ಧುಮುಕಿದ್ದೆ. ಆಪರೇಷನ್ ಆಗಿದ್ದರಿಂದ ತಲೆಯಲ್ಲಿ ರಕ್ತ ಇನ್ನೂ ಜಿನಗುತ್ತಿತ್ತು. ಕಾಟನ್ ಇಟ್ಟುಕೊಂಡು ಮೇಲೆ ಟೋಪಿ ಹಾಕಿಕೊಂಡು ಚುನಾವಣಾ ಪ್ರಚಾರ ಮಾಡಿದ್ದೇನೆ ಎಂದು ಅಳಲು ತೋಡಿಕೊಂಡರು.

ಆದರೆಕ್ಷೇತ್ರದಮತದಾರರುಮಾತ್ರ ನೀವು ಮನೆಯಲ್ಲಿರಿ. ನಿಮಗೆ ವೋಟ್ ಹಾಕುತ್ತೇವೆ ಎಂದು ಭರವಸೆ ನೀಡಿದ್ದರು. ಗ್ರಾಮೀಣ ಭಾಗದ ಮತದಾರರು ನನಗೆ ಕರೆ ಮಾಡಿ, "ನೀ ಟಿಕೆಟ್ ತೊಗೊಂಡು ಬಾ, ನಿನಗ ವೋಟ್ ಹಾಕ್ತೀವ. ನೀನುಸತ್ತರೂನಿನ್ನಹೆಣಕ್ಕೆವೋಟ್ ಹಾಕ್ತೀವ್"ಎಂದಿದ್ದಜನರು,ಕೊಟ್ಟ ಮಾತಿನಂತೆ ನನ್ನನ್ನು ಗೆಲ್ಲಿಸಿದ್ದಾರೆ ಎಂದರು.

# ಜಮಖಂಡಿ ಟಿಎಚ್‌ಓ ದಾಳಿ: ನಕಲಿ ವೈದ್ಯರ ವಿರುದ್ಧ ಪ್ರಕರಣ ದಾಖಲು

**ರಬಕವಿ-ಬನಹಟ್ಟಿ :** ತಾಲ್ಲೂಕಿನ ಯಲ್ಲಟ್ಟಿ, ನಾವಲಗಿ, ಹನಗಂಡಿಯಲ್ಲಿ ನಕಲಿ ವೈದ್ಯರ ವಿರುದ್ಧ ಜಮಖಂಡಿ ಟಿಎಚ್‌ಓ ಡಾ. ಜಿ. ಎಸ್. ಗಲಗಲಿ ನೇತೃತ್ವದ ತಂಡ ದಾಳಿ ನಡೆಸಿ ಎರಡು ಆಸ್ಪತ್ರೆಗಳನ್ನು ಸೀಲು ಹಾಕಿ ಬಂದ್ ಮಾಡಿದ ಘಟನೆ ಗುರುವಾರ ನಡೆದಿದೆ.



ತಾಲೂಕಿನ ನಾವಲಗಿ ಗ್ರಾಮದ ಪ್ರವೀಣ ಮಂಟೂರಮಠ, ಯಲ್ಲಟ್ಟಿ ಗ್ರಾಮದ ರಮೇಶ ಸಂತಿ ವಿರುದ್ಧ ಜಿಲ್ಲಾ ಸಕ್ಷಮ ಪ್ರಾಧಿಕಾರಕ್ಕೆ ದೂರು ಸಲ್ಲಿಸಲಾಗಿದೆ ಎಂದು ಡಾ. ಜಿ. ಎಸ್. ಗಲಗಲಿ ತಿಳಿಸಿದರು. ಅದೇ ರೀತಿಯಾಗಿ ಹನಗಂಡಿ ಗ್ರಾಮದ ಮುನ್ನೋಳ್ಳಿ ಅವರಿಗೆ ಎಚ್ಚರಿಕೆಯನ್ನು ನೀಡಲಾಗಿದೆ. ಯಲ್ಲಟ್ಟಿಯ ಸಂತಿಯವರಿಗೆ ಈಗಾಗಲೇ ಎಚ್ಚರಿಕೆಯನ್ನು ನೀಡಲಾಗಿತ್ತು. ಈ ಸಂದರ್ಭದಲ್ಲಿ ಆರೋಗ್ಯ ಅಧಿಕಾರಿಗಳಾದ ಉಮೇಶ ಜೋಶಿ, ರವಿಚಂದ್ರ ಪಾಟೀಲ, ಅಪ್ಪಾಜಿ ಹೂಗಾರ, ಪೊಲೀಸ್ ಇಲಾಖೆಯ ಎಂ. ಎಸ್. ಶೇಗುಣಸಿ ಭಾಗವಹಿಸಿದ್ದರು.

# "ಜಲಲ ಜಲಲ ಜಲಧಾರೆ" ಗೋಕಾಕ ಜಲಪಾತ

**ಬೆಳಗಾವಿ :** ಜಿಲ್ಲೆಯ ಗೋಕಾಕ ತಾಲ್ಲೂಕು ಹಲವು ವಿಭಿನ್ನ ವಿಶೇಷತೆಗಳನ್ನು ತನ್ನ ಒಡಲಲ್ಲಿ ಗರ್ಭೀಕರಿಸಿಕೊಂಡು ಚಾರಣಿಗರಿಗೆ ಅಪ್ಯಾಯಮಾನ ವಾಗಿದೆ. ಗೋಕಾಕ ಪಟ್ಟಣದಿಂದ 6ಕಿ.ಮೀದೂರದಪಶ್ಚಿಮದಿಕ್ಕಿನಲ್ಲಿ ಬರುವ ಈ ಸುಪ್ರಸಿದ್ಧ "ಗೋಕಾಕ ಜಲಪಾತ"ವು ಬೆಳಗಾವಿಯಿಂದ 60 ಕಿ. ಮೀ. ದೂರದಲ್ಲಿದೆ.ಪ್ರತಿ ಮಳೆಗಾಲದ ಸಂದರ್ಭದಲ್ಲಿ ಅನೇಕ ಪ್ರವಾಸಿಗರನ್ನು ತನ್ನತ್ತ ಕೈ ಬೀಸಿ ಕರೆಯುತ್ತದೆ. ಪ್ರವಾಸಿಗರ ಪಾಲಿನ ಸ್ವರ್ಗವಾದ ಈ ವಿಶಿಷ್ಟ ಸುಂದರ ಜಲಪಾತದ ನಯನ ಮನೋಹರ ದೃಶ್ಯವು ಘಟಪ್ರಭಾ ನದಿಯಿಂದ ಸೃಷ್ಟಿಯಾಗುತ್ತದೆ ಎಂಬುದು ಗಮನಾರ್ಹ. ಗೋಕಾಕ ಜಲಪಾತವು ಅಮೆರಿಕಾ ದೇಶದ ನಯಾಗರ ಜಲಪಾತವನ್ನು ಚೆನ್ನಾಗಿ ಹೋಲುವುದರಿಂದ ಇದನ್ನು "ಭಾರತದ ನಯಾಗರ" ಎಂದು ಕರೆಯುತ್ತಾರೆ. ಕರ್ನಾಟಕದ ಎರಡನೇ ದೊಡ್ಡ ಜಲಪಾತ ಎಂದು ಪ್ರಸಿದ್ಧಿಗೆ ಭಾಜನವಾಗಿದೆ. ಘಟಪ್ರಭಾ ನದಿಯಿಂದ ಅಂಕು ಡೊಂಕಾದ ದಾರಿಯಲ್ಲಿ 52 ಕಿಲೋ ಮೀಟರ್ ನಷ್ಟು ಹರಿದು ದೊಡ್ಡ ದೊಡ್ಡ ಬಂಡೆ ಗಲ್ಲಿನಿಂದ ಜುಳು ಜುಳು ನಿನಾದದೊಂದಿಗೆ ನೃತ್ಯ ಮಾಡುತ್ತ ಸಾಗಿ ಸ್ವಲ್ಪ ರಾಜ ಗಾಂಭೀರ್ಯದಂತೆ ಕಂಡು ಪುಟ್ಟದಾಗಿ ಘರ್ಜನೆ ಮಾಡುತ್ತ ಸಾಗುವ ಈ ಜಲಪಾತ 170 ಅಡಿಯಿಂದ ಪ್ರಪಾತಕ್ಕೆ ಧುಮುಕುತ್ತಿರುವ ದೃಶ್ಯ ನಿಜಕ್ಕೂ ನಯನ ಮನೋಹರ. ತನ್ನ ಆಕಾರ ಹಾಗೂ ಹರಿಯುವ ನೀರಿಗೆ ಈ ಜಲಪಾತ ತುಂಬಾ ಪ್ರಸಿದ್ಧಿ ಹೊಂದಿದೆ.ಹಚ್ಚ ಹಸಿರಿನ ಬೆಟ್ಟ ಗುಡ್ಡವನ್ನು ಸೀಳಿ ಬಂದಂತೆ ಕಂಗೊಳಿಸಿ ಭೋರ್ಗರೆಯುವ ದೃಶ್ಯ ನಿಜಕ್ಕೂ ವರ್ಣಿಸಲಸದಳ. ಗೋಕಾಕ ಜಲಪಾತವು "ಕವಿಗಳಿಗೆ ಸ್ಫೂರ್ತಿ" ನೀಡಿದರೆ ಪ್ರೇಮಿಗಳಿಗೆ "ಉತ್ಸಾಹದ ಬುಗ್ಗೆ" "ಚಿಕ್ಕ ಮಕ್ಕಳಿಗೆ ಕುತೂಹಲದ ಕಾರಂಜಿ" ಚಾರಣ ಪ್ರಿಯರಿಗೆ ನವೋಲ್ಲಾಸ ಇಮ್ಮಡಿಗೊಳಿಸುತ್ತದೆ. ನಾವು ಮಾನವನಾಗಿ ಹುಟ್ಟಿದ ಮೇಲೆ ಒಮ್ಮೆಯಾದರೂ ಇಂತಹ ಅಪರೂಪದ ಜಲಪಾತ ನೋಡಿ ನಲಿಯಬೇಕು. ಈ ಕೌತುಕದ ರಮಣೀಯ ಹಾಗೂ ಸ್ಮರಣೀಯ ದೃಶ್ಯಗಳನ್ನು ಎದೆತುಂಬಿಸಿಕೊಂಡು ನಮ್ಮ ಊರಿನ ಕಡೆ ನಿರ್ಗಮಿಸುವಾಗ ನಮ್ಮ ಮನದಂಗಳದಲ್ಲಿ "ಜಲಲ ಜಲಲ ಜಲಧಾರೆ" ಎಂಬ ಗೀತೆ ನಿನಧಿಸುತ್ತದೆ.ಜಲಪಾತದಪಕ್ಕದಲ್ಲಿ ಇರುವ ಮಹಾಲಿಂಗೇಶ್ವರ ಹಾಗೂ ಬಸವಣ್ಣನ ದೇವಸ್ಥಾನಗಳು ಜಲಪಾತವನ್ನು ವೀಕ್ಷಿಸುವ ಪ್ರವಾಸಿಗರ ಹೃನ್ಮನಗಳನ್ನು ಆಕರ್ಷಿಸುತ್ತವೆ. 1887 ರಲ್ಲಿ ಈ ದೇಶದಲ್ಲಿಯೇ ಮೊಟ್ಟ ಮೊದಲು ಈ ಜಲಪಾತದಿಂದ ವಿದ್ಯುತ್ ಉತ್ಪಾದನೆ ಮಾಡಲಾಯಿತು. ಬುಧವಾರ ದಿ.17 ರಂದು "ಮೊಹರಂ" ನಿಮಿತ್ಯ ಶಾಲಾ ಕಾಲೇಜುಗಳಿಗೆ ರಜೆ ಇದ್ದಿದ್ದರಿಂದ ಸಾವಿರಾರು ಶಾಲಾ ಕಾಲೇಜು ವಿದ್ಯಾರ್ಥಿಗಳೇ ಹೆಚ್ಚಾಗಿ ಈ ಜಲಧಾರೆಯ ಸುಂದರ ವೈಭವ ಕಣ್ತುಂಬಿಸಿಕೊಳ್ಳಲು ಆಸಕ್ತಿ ಹಾಗೂ ಸಂತಸದಿಂದ ಆಗಮಿಸಿದ್ದರು. ನದಿಗೆ ಅಡ್ಡಲಾಗಿ ಕಟ್ಟಿರುವ 110 ವರುಷಗಳಷ್ಟು ಹಳೆಯದಾದ "ತೂಗು ಸೇತುವೆ"ಯ ಜನ ಸಂಚರಿಸುವ ಕಟ್ಟಿಗೆಯಿಂದ ನಿರ್ಮಿತ ಪಟ್ಟಿಗಳು ಈವಾಗ ಅಲ್ಪ ಸ್ವಲ್ಪ ಶಿಥಿಲಗೊಂಡ ಪರಿಣಾಮ ಪ್ರವಾಸಿಗರ ಆದ್ಯ ಸುರಕ್ಷತೆಯ ದೃಷ್ಟಿಯಿಂದ ಪ್ರವೇಶ ದ್ವಾರ ನಿರ್ಭಂಧಿಸಿ ಸಂಪೂರ್ಣ ಸಂಚಾರ ಸ್ಥಗಿತಗೊಳಿಸಿದ್ದಾರೆ. ರಾಜ್ಯದ ಕೆಲವು ಜಲಪಾತಗಳಲ್ಲಿ ಇತ್ತೀಚಿಗೆ ಕುಟುಂಬ ಸಮೇತ ವೀಕ್ಷಿಸಲು ಬರುವ ಪ್ರವಾಸಿಗರು ಸೆಲ್ಫಿಯ ವಿಪರೀತ ಹುಚ್ಚಿಗಾಗಿ ನೀರಿನಲ್ಲಿ ಇಳಿದು ಜಲಪಾತದ ಭಾರಿ ಅಲೆಗಳ ರಭಸಕ್ಕೆ ಕುಟುಂಬ ಸಮೇತ ಕಣ್ಮುಂದೆಯೇ ಕೊಚ್ಚಿಕೊಂಡು ಹೋಗಿರುವ ನೈಜ ಕಹಿ ಘಟನೆಗಳು ನಡೆದಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಆ ಅವಘಡಗಳು ಮರುಕಳಿಸಬಾರದೆಂದು ಈಗ ಎಲ್ಲೆಡೆ ಬಿಗಿ ಭದ್ರತೆ ಮಾಡಿರುತ್ತಾರೆ.



**ವರದಿ : ಡಾ. ಜಯವೀರ ಎ. ಕೆ.**

# ಸಂಚಾರಿ ನಿಯಮಗಳ ಅರಿವು ಅಗತ್ಯ: ಎನ್.ಎಸ್.ಒಡೆಯರ




**ಮೂಡಲಗಿ :** ವಿದ್ಯಾರ್ಥಿಗಳಿಗೆ ಕಾನೂನು ಹಾಗೂ ಸಂಚಾರಿ ನಿಯಮಗಳ ಅರಿವು ಅಗತ್ಯವಾಗಿದ್ದು ಪ್ರಸ್ತುತ ವರ್ಷದಲ್ಲಿ ಬದಲಾದ ಕಾನೂನು ಕಾಯ್ದೆಗಳ ತಿಳಿವಳಿಕೆಯ ಜೊತೆಗೆ ಕಾನೂನು ನಿರಪರಾಧಿಗಳ ರಕ್ಷಣೆಗೆ ಹೇಗೆ ಸಹಾಚು ಮಾಡುತ್ತದೆ ಎಂಬುದನ್ನು ತಿಳಿವಳಿಕೆ ಹೊಂದುವುದು ಅಗತ್ಯವಿದೆ ಎಂದು ಮೂಡಲಗಿ ಪೋಲಿಸ ಠಾಣೆಯ ಸಿಬ್ಬಂದಿ ಎನ್. ಎಸ್. ಒಡೆಯರ ಹೇಳಿದರು,

ಪಟ್ಟಣದ ಆರ್‌ಡಿಎಸ್ ಕಲಾ ವಾಣಿಜ್ಯ ವಿಜ್ಞಾನ ಹಾಗೂ ಸಮಾಜಕಾರ್ಯ ಪದವಿ ಮಹಾವಿದ್ಯಾಲಯ ಹಾಗೂ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಎನ್. ಎಸ್.ಎಸ್. ಕೋಶದ ವತಿಯಿಂದ ಸಮೀಪದ ದತ್ತು ಗ್ರಾಮ ಮುನ್ಯಾಳದಲ್ಲಿ ಹಮ್ಮಿಕೊಂಡ ಎನ್.ಎಸ್. ಎಸ್. ವಾರ್ಷಿಕ ಶಿಬಿರದಲ್ಲಿ ಮಾತನಾಡಿದರು

ಇತ್ತೀಚಿನ ದಿನಗಳಲ್ಲಿ ರಸ್ತೆ ಅಪಘಾತ ಹೆಚ್ಚಾಗಿದ್ದು ವಾಹನ ಚಲಾವಣೆ ಲೈಸನ್ಸ್, ಹೆಲ್ಮೆಟ್,ಇನ್ಸೂರನ್ಸ್, ಪಾಸಿಂಗ್ ಇಲ್ಲದೇ ವಾಹನ ಚಲಿಸಿ ಅಪಘಾತ ಉಂಟಾದರೆ ಕಾನೂನುನಲ್ಲಿ ಅಪರಾದವಾಗುತ್ತದೆ. ಕಾನೂನು ನಿಯಮಗಳಂತೆ ವಾಹನ ಚಲಿಸಿ ತಂದೆ ತಾಯಿಗಳು ನೀಡಿದ ಜೀವವನ್ನು ರಕ್ಷಣೆ ಮಾಡಿಕೊಳ್ಳುವದರ ಜೊತೆಗೆ ಮತ್ತೊಬ್ಬರ ಜೀವವನ್ನು ರಕ್ಷಿಸಿಸಲು ಪೋಲಿಸ ಇಲಾಖೆಯ ಜೊತೆಗೆ ಕೈ ಜೋಡಿಸುವಂತೆ ತಿಳಿಸಿದರು.

ಅತಿಥಿ ಉಪನ್ಯಾಸಕ ಮಲ್ಲಪ್ಪ ಪಾಟೀಲ ಮಾತನಾಡಿ ಸಮಾಜದ ರಕ್ಷಣೆಯಲ್ಲಿ ಪೋಲಿಸ್ ಇಲಾಖೆ ಪಾತ್ರ ಅವಿಸ್ಮರಣಿಯವಾದದ್ದು ಪೋಲಿಸರು ಕಾನೂನು ರಕ್ಷಕರಾಗಿಸಮಾಜದಲ್ಲಿನಡೆಯುವಅಪರಾಧಗಳನ್ನು ತಡೆಯುವಲ್ಲಿ ಮಹತ್ವದ ಪಾತ್ರವಹಿಸುತ್ತಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಡಿವಾಳ ಸಮಾಜ ಮುಖಂಡ ಶಿವಾನಂದ ಮಡಿವಾಳರ ವಹಿಸಿಕೊಂಡು ಮಾತನಾಡಿ ಕಾನೂನು ನಮ್ಮ ರಕ್ಷಣೆಗೆ ಇರುತ್ತದೆ ಅದಕ್ಕೆ ನಾವಲ್ಲರೂ ಗೌರವಕೊಡುವ ಅವಶ್ಯಕತೆ ಇದೆ ಎಂದರು.

ಕಾರ್ಯಕ್ರಮದಲ್ಲಿ ಶಿವಾನಂದ ಬಿಳ್ಳೂರ, ಮಡೆಪ್ಪ ಒಡೆಯರ, ಮುತ್ತು ಒಡೆಯರ, ಪಂಚು ಬೆಣ್ಣಿ ಪ್ರಕಾಶ ಚೌಡಕಿ, ರಾಜು ಪತ್ತಾರ, ಸಂಜೀವ ಮಂಟೂರ ಇತರರು ಹಾಜರಿದ್ದರು.

ಶಿಬಿರಾರ್ಥಿ ಚಂದ್ರಿಕಾ ದರ್ಮಟ್ಟಿ ನಿರೂಪಿಸಿದರು ಶಿಬಿರಾರ್ಥಿ ಸುಕನ್ಯಾ ಬೋಳಿ ಸ್ವಾಗತಿಸಿದರು ಶಿಬಿರಾರ್ಥಿ ಪ್ರಜ್ವಲ್ ಗುದಗನ್ನವರ ವಂದಿಸಿದರು.



**ರಬಕವಿ-ಬನಹಟ್ಟಿ : ತಾಲೂಕಿನ ಹಿಪ್ಪರಗಿ ಜಲಾಶಯಕ್ಕೆ ಜಮಖಂಡಿ ವಿಭಾಗದ ನೂತನ ಕಂದಾಯ ಉಪವಿಭಾಗಾಧಿಕಾರಿ ಶ್ರೀಮತಿ ಶ್ವೇತಾ ಬೀಡಕರ ಭೆಟ್ಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ರಬಕವಿ-ಬನಹಟ್ಟಿ ತಹಶೀಲ್ದಾರ ಗಿರೀಶ ಸ್ವಾಧಿ, ಹಿಪ್ಪರಗಿ ಜಲಾಶಯದ ಅಭಿಯಂತರರು ಇದ್ದರು.**

# ಕಾರ್ಗಿಲ್ ವಿಜಯ 'ರಜತ ಜಯಂತಿ' ಗೌರವ ನಮನ

**ರಬಕವಿ-ಬನಹಟ್ಟಿ :** ಭಾರತೀಯ ಸೇನೆಯು ವಿಜಯದ ಸಂಕೇತ ತೋರಿಸಿ ಸಂಭ್ರಮಿಸಿದ ಕಾರ್ಗಿಲ್ ಯುದ್ಧದ ಗೆಲುವಿಗೆ ಈಗ ರಜತ ವರ್ಷದ ಸಂಭ್ರಮ. 1999 ರ ಜುಲೈ 26 ರಂದು ಪಾಕ್ ಸೇನೆಯನ್ನು ಹಿಮ್ಮೆಟ್ಟಿಸಿ ಸಾಮರ್ಥ್ಯ ಮೆರೆದಿದ್ದ ಭಾರತೀಯ ಸೇನೆಯ ಅಭೂತಪೂರ್ವ ವಿಜಯೋತ್ಸವ ಇದಾಗಿದೆ ಎಂದು ಶಿವಾನಂದ ಗಾಯಕವಾಡ ಹೇಳಿದರು.

ನಗರದ ಸರ್ಕಾರಿ ಪದವಿ ಕಾಲೇಜಿನಲ್ಲಿ ಕಾರ್ಗಿಲ್ ವಿಜಯೋತ್ಸವದ ರಜತ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಯುದ್ಧದಲ್ಲಿ ವೀರ ಮರಣವನ್ನಪ್ಪಿದ ವೀರಯೋಧರಲ್ಲಿ ಅನೇಕ ಜನ ವೀರಯೋಧರ ಛಲವನ್ನು, ಹೋರಾಟವನ್ನು ಹಾಗೂ ಅವರ ವೀರ ಮರಣವನ್ನು ಕುರಿತು ಮಾತನಾಡಿದರು.



ಯೋಗ ಶಿಕ್ಷಕರಾಗಿರುವ ಆನಂದ್ ಬಂಗೇನವರ್ ಮಾತನಾಡಿ ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ನಡೆದ ಅನೇಕ ಅವಘಡಗಳನ್ನು ಹಾಗೂ ಹೋರಾಟದ ರೂಪರೇಶೆಗಳನ್ನು ಹಾಗೂ ಅದರ ಛಾಯಾಚಿತ್ರಗಳನ್ನು ಪ್ರಾಜೆಕ್ಟ್ ಮೂಲಕವಾಗಿ ತೋರಿಸಿ ಮಕ್ಕಳಿಗೆ ಮನವರಿಕೆ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿರುವ ಡಾ. ಚೇತನ್ ಡಾಗಾ ರವರು ಮಾತನಾಡಿ ನಮ್ಮ ಯೋಧರು ನಮ್ಮ ದೇಶವನ್ನು ನಮ್ಮನ್ನು ರಕ್ಷಿಸುತ್ತಿದ್ದಾರೆ. ಅವರಿಗೆ ನಾವೆಲ್ಲರೂ ಅತ್ಯಂತ ಗೌರವದಿಂದ ಕಾಣಬೇಕು. ಕಾರ್ಗಿಲ್ ಯುದ್ಧದಲ್ಲಿ ವಿರೋಚಿತವಾಗಿ ಹೋರಾಡಿ ತಮ್ಮ ವೀರಮರಣ ಹೊಂದಿದ ಪ್ರತಿಯೊಬ್ಬ ಸೈನಿಕರಿಗೂ ನಮನಗಳನ್ನು ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ಮಹಾಂತೇಶ ರಡ್ಡೇರಟ್ಟಿ, ಡಾ. ಮಹಾದೇವ ಪೋತರಾಜ ಹಾಗೂ ಮಾರುತಿ ನಡಕಟ್ಟಿನ, ಮಧುಮತಿ ರಾಯನಗೌಡರು, ಅಂಜನಾ ರಾಠೋಡ, ಡಾ. ದೀಪಾ ಜಹಗಿರದಾರ, ಆರ್. ಡಿ. ಬೀಳಗಿ, ಎ. ಬಿ. ಹೊನವಾಡ, ಪ್ರಕಾಶ ಅಂಬಲಿ ಉಪಸ್ಥಿತರಿದ್ದರು.

ಮುತ್ತವ್ವ ತಳವಾರ ಪ್ರಾರ್ಥಿಸಿದರು. ನಂದಿನಿ ತಳವಾರ ಸ್ವಾಗತಿಸಿದರು. ಸೋಮು ನಿಂಗನೂರ ವಂದಿಸಿದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State